have to be retrenched. But subsequently it was brought to my notice that at least for a temporary period, for at least a few months until the accounts are finalised, their presence is absolutely essential. There are audit objections to the tune of several lakhs I remember it is about 50 to 60 lakhs and the Director of Food Supplies brought to my notice that the process of avoiding or eliminating this Department would be hampered if those posts are retrenched forthwith. Therefore, as a temporary measure, since I am convinced that these posts are essential for a temporary period, I have allowed them to remain. Moreover they are not going home. They are permanent officials. They have got their permanent appointments elsewhere. They revert.

Sri R. ANANTARAMAN.—Another piece of information. Is it not a fact that no notices were at all given to them and the very next day they were retrenched ?

Sri H. SIDDAVEERPPA.—On the very day on which they were appointed notices were given to them that their appointment was only temporary.

Mr. SPEAKER.—As Hon'ble Members are aware, the Food Department started as a temporary department and persons who were employed in the department know when they joined that their appointments were temporary. Further from the time of the lifting of controls, the policy of the Government in retrenching temporary posts has been made clear and is being implemented from time to time. The subject therefore is not in the nature of a 'sudden emergency' entitling it to admission as an adjournment motion. In fact, certain questions, as pointed out by the Hon'ble Minister for Home and Industries, have been tabled on this subject and answered during this very session. In regard to the hardship that might be caused, the Hon'ble Minister has further given the assurance that steps would be taken to mitigate it as far as possible. In the circumstances I hold the motion is out of order.

MYSORE RELIGIOUS AND CHARITABLE INSTITUTIONS (INAMS) ABOLITION BILL, 1954.

Motion to consider (concld.)

Mr. SPEAKER.—Now Bills. Sri Prabhakar was in the midst of his speech on the last occasion. He can continue his speech.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ—ಅನುಸೂಚಿತ ಜಾತಿಗಳು).—ಸಭಾಧ್ಯಕ್ಷರೇ ಕಳೆದ ಶನಿವಾರ Religious Inams Abolition Bill ವಿಚಾರದಲ್ಲಿ ಮಾತನಾಡುತ್ತಾ ಇದ್ದೆ. ಅದರ ಬಗ್ಗೆ ಇನ್ನು ಕೆಲವು ಉಪಯುಕ್ತವಾದ ವಿಚಾರಗಳನ್ನು ಮಾತ್ರ ತಿಳಿಸಬೇಕಾಗಿರುವುದರಿಂದ ಅವುಗಳನ್ನು ತಿಳಿಸಲು ಈಗ ನಿಂತಿರುತ್ತೇನೆ. ನಾನು ಹೇಳಿರುವ ಪ್ರಕಾರ ತಾವುಗಳೆಲ್ಲರೂ ಸಹ ಹೊಸ ರಾಜ್ಯಾಂಗ ನಿಯಮಗಳೇನಿವೆಯೋ ಅವುಗಳನ್ನು ಪರಿಪಾಲಿಸಿಕೊಂಡು ಬರುವುದರಲ್ಲಿ ಸಂಪೂರ್ಣ ಜವಾಬ್ದಾರಿಯುಳ್ಳವರಾಗಿದ್ದೀರಿ. ಈಗ ನಮ್ಮ ದೇಶದ ಅನೇಕ ಸಂಸ್ಥೆಗಳ ಕರ್ತವ್ಯಪಾಲನೆ ವಿಚಾರ ಕುರಿತು ಮಾತನಾಡುವಾಗ ಏನೇ ಅಡ್ಡಿ ಆತಂಕ ಬರಲಿ, ಎಷ್ಟೇ ಬರಲಿ, ಹೊಸ ರಾಜ್ಯಾಂಗ ನಿಯಮಾವಳಿಯ ತತ್ವಕ್ಕನುಸಾರವಾಗಿ ಆ ಸಂಸ್ಥೆಗಳನ್ನು ನಡೆತನ ಗೊಳಿಸುವಂತೆ, ರೂಪಗೊಳಿಸುವಂತೆ ಕಾರ್ಯಕ್ರಮವನ್ನು ಅನುಸರಿಸಬೇಕಾದುದು ನಮ್ಮ ದೇಶದ ಸಮಸ್ತರ ಜವಾಬ್ದಾರಿ ಎಂದು ಹೇಳಬಹುದಾಗಿದೆ. ಈಗ ಶೃಂಗೇರಿ ಜಹಗೀರಿಯ ವಿಚಾರದಲ್ಲಿ ಮಾತನಾಡಿರತಕ್ಕ ಅನೇಕ ಮಹನೀಯರು ತಮ್ಮ ಉಪಯುಕ್ತ ಸಲಹೆಗಳನ್ನು ಕೊಡತಕ್ಕ ಕಾಲದಲ್ಲಿ ಜೆನ್ಕೆಸಿ ಆಕ್ಟ್ ನಮ್ಮ ದೇಶದಲ್ಲಿ ಜಾರಿಗೆ ಬಂದಮೇಲೆ ಅದರಿಂದ ರೈತರಿಗೆ ಒದಗಿರುವ ತೊಡಕುಗಳ ನಿವಾರಣೆಯ ಬಗ್ಗೆ ಪ್ರಸ್ತಾಪಿಸುತ್ತಾ, ಶೃಂಗೇರಿಯ ಹೆಸರು ಕೇಳಿದ ಕೂಡಲೇ ಅಲ್ಲರತಕ್ಕ ರೈತಾಪಿ ಜನರಿಗೂ ಅಲ್ಲಿನ ಮಹತ್ವಕ್ಕೂ ಸಂಬಂಧ ಕಲ್ಪಿಸುವ ಮೂಲಕ ವಿಷಯವನ್ನು ಸ್ವಲ್ಪ ಹೆಚ್ಚು ಬಿಕ್ಕಟ್ಟಾಗಿ ಮಾತನಾಡಿದರು. ಆದರೆ ಅದರಲ್ಲಿರತಕ್ಕ ವಿಚಾರ ಕೇವಲ ಸರಳವಾದುದು. ಆದರೆ ಕೆಲವು ಮಾನ್ಯ ಸದಸ್ಯರು ಮಾತನಾಡುವಾಗ ಈ ಶೃಂಗೇರಿ ಜಹಗೀರಿ ಎಂಬುದು ಪುರಾತನ ಕಾಲದಿಂದಲೂ ನಡೆದುಕೊಂಡು ಬಂದು, ಏನೋ ಒಂದು ವಿಧವಾದ ಮಹತ್ವ ಸಂಪಾದಿಸಿದೆಯೆಂಬ ಶಂಕೆ ಜನರಲ್ಲಿ ಮೂಡುವ ಹಾಗೆ ಮಾತನಾಡಿದರು. ನನಗೆ ಗೊತ್ತಿರುವ ಹಾಗೆ ಶ್ರೀ ಕೆ. ಚೆಂಗಲರಾಯ ರೆಡ್ಡಿಯವರು ಮುಖ್ಯ ಮಂತ್ರಿಗಳಾಗಿದ್ದ ಕಾಲದಲ್ಲಿಯೇ ಈ ಬಗ್ಗೆ ಕಾನೂನು ಆಗಬೇಕಾಗಿತ್ತು. ಆದರೆ ಈ ವಿಚಾರದಲ್ಲಿ ಆಗಿನ ಮಂತ್ರಿ ಮಂಡಲವೇಕೋ ಸ್ವಲ್ಪ ಹೋಲಾಯಮಾನವಾಗಿದ್ದು, ಈ ವಿಚಾರದಲ್ಲಿ ಮುಂದುವರಿದರೆ ಏನೋ ಎಂಬ ಒಂದು ಕಲ್ಪನಾ ಭಾವನೆಯಲ್ಲಿ ಮುಂದುವರಿಯದೆ ಹಾಗೆಯೇ ಇದ್ದು, ಈಗ ಅದು ಈ ಮಂತ್ರಿ ಮಂಡಲದ ಕಾಲದಲ್ಲಿ ಕಾರ್ಯಗತವಾಗುವ ನಿರೀಕ್ಷಣೆ ಇದೆ. ಈಗಲಾದರೂ ನಮ್ಮ ಸರ್ಕಾರದವರು ಈ ವಿಚಾರದಲ್ಲಿ ಸ್ವಲ್ಪವೂ ಧೈರ್ಯ ಗೆಡದೆ ಈ ಬಗ್ಗೆ ಕಾನೂನು ಮಾಡಿ ಶಾಸನ ಕಡತಕ್ಕೆ ಏರಿಸಬೇಕೆಂದು ದೃಢಸಂಕಲ್ಪ ಮಾಡಿರುವುದು ಸಂತೋಷದ ವಿಚಾರ. ಈ ಶೃಂಗೇರಿ ಜಹಗೀರಿಯ ಮಾನ್ಯತೆಗೆದು ಅಲ್ಲಿ ಜೆನ್ಕೆಸಿ ಆಕ್ಟ್ ಜಾರಿಗೆ ತರುವುದರಿಂದ

(ಶ್ರೀ ಕೆ. ಪ್ರಭಾಕರ್)

ಅಲ್ಲಿನ ರೈತಾಪಿ ಜನರಿಗೆ ಮಹದುಪಕಾರವಾಗುತ್ತದೆ. ಯಾರು ಜಮೀನು ಉಳುತ್ತಾರೆಯೋ ಅವರಿಗೆ ಆ ಜಮೀನು ನೇರವಾಗಿ ನಲ್ಲಬೇಕು. ಶೃಂಗೇರಿ ಜೋಡಿ ದಾರರಾಗಲಿ, ಮಾನ್ಯ ಪಡೆದಿರುವವರಾಗಲಿ ಈಗಿನ ಕಾಲ ಧರ್ಮಕ್ಕನುಸಾರವಾಗಿ ನಡೆಯಬೇಕೆಂಬುದನ್ನು ಅರಿತುಕೊಳ್ಳಬೇಕು. ಯಾವ ವಿಚಾರದಲ್ಲಿಯೇ ಆಗಲಿ rule of law ಅನುಸರಿಸಿ ನಾವು ನಡೆಯುವುದು ಸೂಕ್ತವಾದುದು. ಈ ದೃಷ್ಟಿಯಿಂದ ಶೃಂಗೇರಿ ಮಾನ್ಯವನ್ನು ರದ್ದುಪಡಿಸಿ ಅಲ್ಲಿನ ರೈತರಿಗೆ ಅನುಕೂಲವನ್ನು ಕಲ್ಪಿಸಬೇಕೆಂಬ ಸರ್ಕಾರದ ತತ್ವ ಸರಿಯಾಗಿದೆ. ಈ ವಿಚಾರದಲ್ಲಿ middle men ಯಾವ ಪಾತ್ರವನ್ನು ವಹಿಸಲೂ ಅವಕಾಶಕೊಡಬಾರದೆಂದು ನನ್ನ ವಿನಂತಿ. ಯಾರು ಜಮೀನನ್ನು ಉಳುತ್ತಾರೆಯೋ ಅವರಿಗೆ ಇದರ ಫಲ ದೊರಕುವಂತಿರಬೇಕು. ಇಷ್ಟೇ ಅಲ್ಲದೆ Service Inam ಸಹ ರದ್ದಾಗಬೇಕೆಂದು ನನ್ನ ವಿನಂತಿ. ನಮ್ಮ ದೇಶದಲ್ಲಿ ಪ್ರತಿಯೊಬ್ಬ ಉಳುವೆ ಮಾಡುವ ರೈತನೂ ಸರ್ಕಾರಕ್ಕೆ ನೇರವಾಗಿ ಕಂದಾಯ ನಲ್ಲಿಸುವ ಸ್ಥಿತಿಯಲ್ಲಿರಬೇಕು.

ಆದ್ದರಿಂದ ಶೃಂಗೇರಿ ಜಹಗೀರಿ ರದ್ದುಮಾಡುವ ವಿಚಾರದಲ್ಲಿ ಇದುವರೆಗೂ ಮಾತನಾಡಿದ ಮಾನ್ಯ ಸದಸ್ಯರುಗಳ ಪೈಕಿ ಆ ರೀತಿ ಮಾಡಬಾರದು, ಅನುಚಿತ ಎಂದು ಯಾರೂ ಕೂಡ ಹೇಳಲಿಲ್ಲ. ಬಹುಶಃ ಸರ್ಕಾರದವರು ಯೋಚನೆ ಮಾಡಬೇಕಾದ ಭಾಗ ಏನೆಂದರೆ, ನನ್ನ ಮಿತ್ರರನೇಕರು ತಿಳಿಸಿದ್ದಾರೆ, ಈ ರಿಲಿಜಿಯಸ್ ಇನ್‌ಸ್ಟಿಟ್ಯೂಷ್ಟ್‌ಗಳು ತಮಗಿದ್ದ ಒಂದು ಮಾನ್ಯತೆಯಿಂದ ಅವುಗಳ ಕಾರ್ಯಕಲಾಪಗಳನ್ನು ಒಂದಲ್ಲ ಒಂದು ರೂಪದಲ್ಲಿ ನಡೆಸಿಕೊಂಡು ಬಂದು ಸಮಾಜಸೇವೆ ಮಾಡುತ್ತಾ ಇವೆ, ಈಗ ಸರ್ಕಾರ ಆ ಮಾನ್ಯತೆಯನ್ನು ರದ್ದುಮಾಡಿ ದುಡ್ಡಿನ ರೂಪದಲ್ಲಿ ಕೊಟ್ಟ ಪಕ್ಷದಲ್ಲಿ, ಅದು ಸ್ಥಿರಸ್ಪತ್ತಿನಷ್ಟು ಸ್ಥಿರವಾದ ದ್ದಲ್ಲ, ಯಾವ ಕಾಲದವರೆಗೆ ಬೇಕಾದರೂ ಕೊಡಬಹುದು ಅಥವಾ ಆ ಸಂಸ್ಥೆಗಳವರು ಮಾಡತಕ್ಕ ಕಾರ್ಯ ಸರಿಯಾಗಿಲ್ಲ ಏಕೆ ನಿಲ್ಲಿಸಬಾರದು ಎಂದು ಹೇಳಿ ಸರ್ಕಾರ ಕೈಹಾಕುವುದಕ್ಕೆ ಅವಕಾಶ ಸಿಕ್ಕುತ್ತದೆ—ಎಂದು ಹೇಳಿ ಕೆಲವರು ಯೋಚನೆ ಮಾಡುತ್ತಾ ಇದ್ದಾರೆ. ತಾವು ಏನೇ ಒಂದು ಬದಲಾವಣೆ ಮಾಡಿದರೂ ಕೂಡ ಅದರಿಂದ ನಮಾಜಕ್ಕೆ ತೊಂದರೆ ಎಂದು ಭಾವಿಸುವುದು ತಪ್ಪು. ಏಕೆಂದರೆ ಸರ್ಕಾರ ಭೂಮಿಯ ಗ್ರಾಂಟನ್ನು ತಪ್ಪಿಸಿ ಕ್ಯಾಷ್ ಗ್ರಾಂಟ್ ಕೊಡತಕ್ಕ ಪದ್ಧತಿಯನ್ನು ಅನುಸರಿಸುವುದು ಒಳ್ಳೆಯದು. ಈಗ ಹಾಲಿ ಅನೇಕ ಇನ್‌ಸ್ಟಿಟ್ಯೂಷ್ಟ್‌ಗಳಿಗೆ ಕ್ಯಾಷ್ ಗ್ರಾಂಟ್ ಕೊಡುತ್ತಾ ಇದ್ದಾರೆ. ಸರ್ಕಾರದ ಕೈವಾಡ ಇದ್ದು, ಆ ಸಂಸ್ಥೆಗಳು ಧರ್ಮಕ್ಕೆ, ನೀತಿಗೆ ಅನುಸಾರವಾಗಿ, ಅಥವಾ ಯಾವ ಒಂದು ಉದ್ದೇಶಕ್ಕೆ ಒಂದು ಗುರಿಯ ಸಾಧನೆಗೆ ಕೆಲಸಮಾಡುತ್ತಾ ಇವೆಯೋ ಅದನ್ನು ಸರಿಯಾದ ರೀತಿಯಲ್ಲಿ ಮಾಡಿಕೊಂಡು ಬರಬೇಕು, ಒಂದು ವೇಳೆ ತಪ್ಪಿದರೆ ಗ್ರಾಂಟ್ ನಿಲ್ಲಿಸುವುದಕ್ಕೆ ಅಥವಾ ಕೊಡುವುದು ಬೇಡ ಎಂದು ಹೇಳತಕ್ಕ ಒಂದು ಧೋರಣೆ ತಾಳುವುದಕ್ಕೆ ಅವಕಾಶ ಇರುತ್ತದೆ. ಅಂಥ ಸಂದರ್ಭ ಬಂದಾಗ ಸರ್ಕಾರ ಬಹಳ ಉದಾರತೆಯಿಂದ, ಧರ್ಮ ದೃಷ್ಟಿಯಿಂದ ಕೆಲಸ ಮಾಡಬೇಕಾದ ಒಂದು ಪ್ರಮೇಯ ಬರುತ್ತದೆ. ಅಂಥ ಸಂದರ್ಭದಲ್ಲಿ ಇಂಥಿಂತ ಧರ್ಮ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಆದ್ದರಿಂದ ಕ್ಯಾಷ್ ಗ್ರಾಂಟ್ ಕೊಡುವುದಿಲ್ಲ ಎಂದು ಹೇಳಿ ಬಹುದು, ಅಥವಾ ಸರಿಯಾಗಿ ಕೆಲಸ ಮಾಡಬೇಕು ಮಾಡಿದರೆ ಮಾತ್ರ ಕೊಡುತ್ತೇವೆ ಎಂದು ಹೇಳತಕ್ಕ ಅಧಿಕಾರ ಇರುತ್ತದೆ. ಇವೊತ್ತು ಸರ್ಕಾರದವರು ಈ ಬಿಲ್ಲಿನ ಮುಖಾಂತರವಾಗಿ ಶೃಂಗೇರಿ ಜಹಗೀರಿ ರದ್ದು ಮಾಡತಕ್ಕದ್ದು ಮಾತ್ರವಲ್ಲ; ಇದು ಎಲ್ಲಾ ಮಠಗಳಿಗೂ ಕೂಡ ಅನ್ವಯಿಸತಕ್ಕದ್ದಾಗಿದೆ. ಕ್ಯಾಷ್ ಗ್ರಾಂಟ್ ಕೊಟ್ಟು ನಡೆಸಬಹುದು ಎಂಬ ತತ್ವವನ್ನು ನಾವೆಲ್ಲರೂ ಒಪ್ಪಿಕೊಂಡ ಹಾಗಾಗುತ್ತದೆ. ಇದು ಈಗಿನ ಕಾಲ ದೇಶ ವರ್ತಮಾನಗಳಿಗನುಸಾರವಾಗಿ ಇದೆ. ಇವೊತ್ತಿನ ಸಮಾಜ ಸುಭದ್ರವಾಗಿ, ಜನಗಳ ಮನಸ್ಸಿನಲ್ಲಿರತಕ್ಕ ಕ್ಷುದ್ರವಾದ ಸಣ್ಣಪುಟ್ಟ ವಿಚಾರಗಳು ಮಾಪರ್ಾಡಾಗಿ, ಹೊಸ ಹುರುಪಿನಿಂದ ಕೂಡಿದ ಸಮಾಜ ರಚನೆಯಾಗ ಬೇಕಾದರೆ ಪದೇ ಪದೇ ನಾನು ಹೇಳುತ್ತಾ ಇರುವ ಹಾಗೆ . . .

ಅಧ್ಯಕ್ಷರು.—ಪದೇ ಪದೇ ಅದನ್ನೇ ಹೇಳುತ್ತೀರಿ, ಅದು ನಿಜ. ಹಿಂದಿನ ದಿವಸ ಜನರಲ್ ಆಗಿ ಬೇಕಾದಷ್ಟು ಹೇಳಿದ್ದೀರಿ. You are repeating the same things.

ಶ್ರೀ ಕೆ. ಪ್ರಭಾಕರ್.—ರಿಲಿಜಿಯಸ್ ಇನಾಂಸ್ ರದ್ದು ಮಾಡುವ ವಿಚಾರದಲ್ಲಿ ನಮ್ಮ ಒಪ್ಪಿಗೆಯನ್ನು ಸಂಪೂರ್ಣವಾಗಿ ಕೊಟ್ಟಿದ್ದೇವೆ. ಸರ್ಕಾರದವರೂ ಕೂಡ ಅದೇ ಅಭಿಪ್ರಾಯವುಳ್ಳವರಾಗಿರುವುದಕ್ಕಾಗಿ ಸಂತೋಷಪಡುತ್ತೇನೆ ಎಂದು ಹೇಳಬೇಕಾಗಿದೆ. ಶೃಂಗೇರಿ ಮೊಟ್ಟಮೊದಲು ಪ್ರಾರಂಭವಾದದ್ದು. ಯಾವ ಒಂದು ಮಠವೇ ಆಗಲಿ, ಧರ್ಮಸಂಸ್ಥೆ ಆಗಲಿ ಮತಸಂಬಂಧವಾದ ಸಂಸ್ಥೆ ಆಗಲಿ ಅದು ಕೇವಲ ಕೆಲವು ಜನಗಳ ಆಸ್ತಿಯಾಗಿ ಕೆಲವರ ರಕ್ಷಣೆಗಾಗಿ ಇರತಕ್ಕ ಸಂಸ್ಥೆ ಎಂದು ಭಾವಿಸದೆ, ದೇಶದ ಜನಗಳ ಹಿತಕ್ಕಾಗಿ ಇರತಕ್ಕ ಸಂಸ್ಥೆ ಎಂದು ಪರಿಗಣಿಸಲ್ಪಡಬೇಕು.

ಅಧ್ಯಕ್ಷರು.—ಪುನಃ ಜನರಲ್ ಆಗಿ ಹೇಳುತ್ತಿದ್ದೀರಿ. Please speak on the merits of the Bill. There are other Members who want to speak.

ಶ್ರೀ ಕೆ. ಪ್ರಭಾಕರ್.—ಶೃಂಗೇರಿ ಇನಾಂ ರದ್ದು ಮಾಡುವ ವಿಚಾರದಲ್ಲಿ ಸರ್ಕಾರದವರು ತಡಮಾಡ ಕೂಡದು. ಈ ಬಿಲ್ಲನ್ನೂ ಮತ್ತೊಂದು ಕಮಿಟಿಗೆ ಹಾಕಿರೋಣದರಿಂದ ಅನೇಕ ತಿಂಗಳುಗಳು ಕಾಲ ಕಳೆಯದೇ ಆದಷ್ಟು ಬೇಗ ಕಾರ್ಯಗತವಾಡಿ ಅಲ್ಲಿನ ರೈತರು ಮತ್ತು ಇತರ ಜನಗಳಿಗೆ ಅನುಕೂಲವಾಗುವ ಕಾನೂನು ಮಾಡಿ ದೇಶಕ್ಕೆ ಉಪಕಾರಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

*ಶ್ರೀ ಡಿ. ದೇವರಾಜಅರಸ್ (ಹುಣಸೂರು).—ಸ್ವಾಮಿ, ಸರ್ಕಾರದವರು ನಮ್ಮ ಮುಂದೆ ಮಂಡಿಸಿರತಕ್ಕಂತ ರಿಲಿಜಿಯಸ್ ಮತ್ತು ಚಾರಿಟಬಲ್ ಇನಾಂಸ್ ರದ್ದಿಯಾತಿ ಬಿಲ್ಲಿನಲ್ಲಿ ಯಾವ ಯಾವ ಇನಾಂಗಳನ್ನು ರದ್ದುಮಾಡಬೇಕೆಂಬುದನ್ನು ನಮೂದಿಸುತ್ತಾ ಮೂರು ಮುಖ್ಯವಾದ ವಿಷಯಗಳನ್ನು ಹೇಳಿದ್ದಾರೆ. Chapter (1) ಸೆಕ್ಷನ್ (1) ರಲ್ಲಿ it applies to religious inams including Sringeri Jahagir ಎಂದು ಇದೆ. ಎಂದರೆ ಎಲ್ಲಾ ವಿದವಾದ, ದೇವಾದಾಯ ಇನಾಂಗಳು, ಶೃಂಗೇರಿ ಜಹಗೀರಿ ಮತ್ತು charitable inams ಎಂದರೆ ಧರ್ಮದಾಯ ಎಂದು ಕಾಣುತ್ತದೆ, ಧರ್ಮದಾಯ ಇನಾಂಗಳು ಈ ಮೂರನ್ನೂ ಈ ಬಿಲ್ಲಿನ ಮೂಲಕ ರದ್ದುಮಾಡಬೇಕೆಂದು ಅವರ ಮೂಲ ಉದ್ದೇಶವನ್ನು ವ್ಯಕ್ತಪಡಿಸಿದ್ದಾರೆ. ಸ್ವಾಮಿ, ಶೃಂಗೇರಿ ಜಹಗೀರಿ ವಿಚಾರದಲ್ಲಿ ಈಗಾಗಲೇ ಇಡೀ ಈ ಮಾನ್ಯ ಸಭೆಯ ಸದಸ್ಯರೆಲ್ಲರೂ

ಕೂಡ ಏಕವಾಕ್ಯದಿಂದ ಇದನ್ನು ರದ್ದುಮಾಡುವುದು ಸೂಕ್ತ. ಇದರಿಂದ ಆ ಸ್ಥಳದ ರೈತರಿಗೆ ಉಪಕಾರವಾಗುತ್ತದೆ ಎಂದು ಹೇಳಿರೋಣದರಿಂದ ನಾನು ಆ ವಿಚಾರದಲ್ಲಿ ಹೆಚ್ಚು ಪ್ರಸ್ತಾಪಮಾಡಬೇಕಾದ ಅಗತ್ಯ ಏನೂ ಇಲ್ಲ ಎಂದು ಹೇಳಿ ತಿಳಿದುಕೊಂಡಿದ್ದೇನೆ.

ಎರಡನೆಯದು ಈ ದೇವಾದಾಯ ಇನಾಂಸ್ ಎಂದು ಇದೆಯಲ್ಲಾ ಈ ಇನಾಂಗಳನ್ನು ರದ್ದುಮಾಡಬೇಕಾದರೆ, ಇದು ಮಾಡಬೇಕೇ ಅಥವಾ ಮಾಡಿದರೆ ಯಾವ ರೀತಿಯಾದ ಕಾನೂನನ್ನು ಇದಕ್ಕೆ ರಚನೆಮಾಡಬೇಕು ಅಥವಾ ಇದನ್ನು ಹಾಗೆಯೇ ಉಳಿಸಿಕೊಳ್ಳಬೇಕೇ ಎಂಬತಕ್ಕ ಪ್ರಶ್ನೆಯಲ್ಲಿ ಈ ಮಾನ್ಯ ಸಭೆಯಲ್ಲಿ ಅನೇಕರು ಮಾತನಾಡುವಾಗ ನನಗೆ ಭಾನವಾದದ್ದು ಏನೆಂದರೆ, ಶೃಂಗೇರಿ ಜಹಗೀರಿ ಮಾತ್ರ ರದ್ದು ಆಗುವುದು ಅನ್ನುವ ಹಾಗೆ ಎಲ್ಲರ ಮನಸ್ಸಿನಲ್ಲೂ ಕೂಡ ಇದೆ. ಅದು ಶೃಂಗೇರಿ ಮಠದ ಮೇಲೆ ಕೇಂದ್ರಿಕೃತವಾಗಿದೆಯೇ ಹೊರತು ದೇವಾದಾಯ ಇನಾಂಗಳನ್ನು ರದ್ದುಮಾಡುವಾಗ ಇದರ ಪರಿಣಾಮ ಏನು, ಇದು ಯಾವ ಯಾವ ಇನಾಂಗಳಿಗೆ ಅನ್ವಯಿಸುತ್ತದೆ ಎಂಬುದರ ಕಡೆಗೆ ಹೆಚ್ಚು ಗಮನ, ಮನಸ್ಸು ಕೊಟ್ಟು ಮಾತನಾಡಿಲ್ಲ ಎಂದು ತೋರುತ್ತದೆ. ಮಾನ್ಯ ಸ್ನೇಹಿತರಾದ ಪಟ್ಟಾಭಿರಾಮರವರು ಪೊನ್ನೆದಿವಸ ಮಾತನಾಡುತ್ತಾ ಕೆಲವು ಅಂಕಿಅಂಶಗಳನ್ನು ನಮ್ಮ ಈ ಸಭೆಯ ಮುಂದೆ ಇಟ್ಟಿದ್ದಾರೆ. ಅದರದೇ ಒಂದು ಪಟ್ಟಿ ನನ್ನಹತ್ತಿರದಲ್ಲೂ ಇದೆ ಸ್ವಾಮಿ. ಘನ ಸರ್ಕಾರದವರು ಈ ಇನಾಂ ಬಿಲ್ಲನ್ನು ನಮ್ಮ ಮುಂದೆ ತರುವಾಗ ಈ ಅಂಕಿಅಂಶಗಳನ್ನು ಕೂಡ ಅದರ ಜೊತೆಯಲ್ಲೇ ಒದಗಿಸಿದ್ದಿದ್ದರೆ ಬಹುಶಃ ನಮ್ಮ ಈ ಸಭೆಯ ಕಾರ್ಯಕಲಾಪಗಳಿಗೆ ತುಂಬಾ ಅನುಕೂಲವಾಗುತ್ತಿತ್ತು ಎಂದು ಭಾವಿಸುತ್ತೇನೆ.

These things were not supplied by Government. As they have not supplied, I force it on Government and say that this is the correct thing.

ಅವರಿಗೆ ಕಷ್ಟವೂ ಆಗುತ್ತಿರಲಿಲ್ಲ. ಪ್ರತಿ ತಾಲ್ಲೂಕು ಆಫೀಸಿನಲ್ಲೂ ಕೂಡ ರಿಲಿಜಿಯಸ್ ಇನಾಂ ಯಾವುದು, ಏನಿದೆ ಎಂದು ಒಂದು ತಃಖ್ತೆಯಿಟ್ಟಿದ್ದಾರೆ; ಕ್ಲೈಟ್ ರೆಂಟ್ ರಿಜಿಸ್ಟರಿದೆ. ಇದನ್ನೆಲ್ಲಾ ಕ್ರೋಡೀಕರಿಸಿ ನಮ್ಮ ಮುಂದೆ ಸುಲಭವಾಗಿ ಇಡಬಹುದಾಗಿತ್ತು. ಹಾಗಿರುವಾಗ ಏಕೆ ಇಡಲಿಲ್ಲ? ಅಂಕಿಅಂಶ ಯಾವ ರೀತಿಯದೆಯೆಂದರೆ ಮಾನ್ಯ ಸ್ನೇಹಿತರು ಹೇಳಿದ ಹಾಗೆ ಸುಮಾರು 16,500 ಕ್ಕೆ ಮೇಲ್ಪಟ್ಟ ದೇವಾದಾಯ ಇನಾಂಗಳಿವೆಯೆಂದು ವ್ಯಕ್ತವಾಗುತ್ತದೆ.

ಇದರಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾದ ಅಂಶ ಇನ್ನೊಂದಿದೆ. ಈ ಇನಾಂಗಳು ಹೇಗಿವೆಯೆಂದರೆ 5 ಎಕರೆಗೆ ಮೇಲ್ಪಟ್ಟು 25 ಎಕರೆಯೊಳಗಿರುವಂತೆ ಜಮೀನಿರುವುದು ಸುಮಾರು 8 ಸಾವಿರ ದೇವಾದಾಯ ಇನಾಂಗಳಿವೆ, 5 ಎಕರೆಗೆ ಒಳಪಟ್ಟಿರುವುದು 9 ಸಾವಿರ ಇವೆ. ಇದರಲ್ಲಿ ಸ್ವಲ್ಪ ದೀರ್ಘವಾಗಿ ಯೋಚನೆಮಾಡಬೇಕಾದ ವಿಚಾರವಿದೆ. ನೀವು ಇನಾಂತಿಗಳನ್ನು ರದ್ದುಮಾಡುವಾಗ ಈ ಸಭೆಯ ಉದ್ದೇಶ ಮತ್ತು ಸರ್ಕಾರದ ಉದ್ದೇಶವೇನಿದೆಯೆಂದರೆ, ರೈತರಿಗೆ ನಮ್ಮ ದೇಶದಲ್ಲಿ ಅನುಕೂಲವಾಗಬೇಕು. ಈ ಇನಾಂಗಳಿಂದ ಅವರು ಬಹಳ ತೊಂದರೆಪಟ್ಟಿದ್ದಾರೆ, ಸರ್ಕಾರಿ ಗ್ರಾಮಗಳಲ್ಲಿರುವ ರೈತರಿಗೆ ಯಾವ ರೀತಿಯ ಸೌಕರ್ಯ ಇದುವರೆಗೆ ಇದೆಯೋ ಅದೇ ರೀತಿಯ ಸೌಕರ್ಯ ಇನಾಂ ಗ್ರಾಮದ ರೈತರಿಗೂ ದೊರೆಯಬೇಕು, ಇನಾಂದಾರರಿಂದ ಕಷ್ಟಕ್ಕೆ ಸಿಕ್ಕಿ ಬಹಳವಾಗಿ ನೊಂದಿದ್ದಾರೆ, ಅವರಿಗೆ ಬಹಳವಾಗಿ ದ್ರವ್ಯರೂಪದಲ್ಲೂ ಧಾನ್ಯರೂಪದಲ್ಲೂ ಕೊಟ್ಟು ಕೊಂಡು ಬಂದಿದ್ದಾರೆ ಇತ್ಯಾದಿ ಇತ್ಯಾದಿ ಎಂದು ವಿವರಣೆ ಮಾಡಿದ್ದಾರೆ. ಈ ತೊಂದರೆಗಳೆಲ್ಲ ನಿವಾರಣೆಯಾಗಬೇಕು ಮತ್ತು ಉಳುವ ರೈತರಿಗೆ ಜಮೀನು ಸಿಕ್ಕಬೇಕು ಎಂಬ ಘನೋದ್ದೇಶದಿಂದ ನಾವು ಈ ಇನಾಂಗಳನ್ನೆಲ್ಲಾ ರದ್ದುಮಾಡುತ್ತೇವೆ. ಈ ರಿಲಿಜಿಯಸ್ ಇನಾಂ ಎಂದೇನಿದೆಯೋ ಅದು ಈಗಾಗಲೇ ಒಬ್ಬ ಮಾನ್ಯ ಸದಸ್ಯರು ಹೇಳಿದ ಹಾಗೆ ಬರೀ ಇನಾಂ ಗ್ರಾಮಗಳಲ್ಲಿ ಮಾತ್ರ ಇಲ್ಲ, ಪ್ರತಿಯೊಂದು ಸರ್ಕಾರಿ ಗ್ರಾಮಗಳಲ್ಲೂ ತಮಗೆ ಗೊತ್ತಿರುವ ಹಾಗೆ ದೇವಸ್ಥಾನದ ಸಾರಿಗೆ ಎಂದು ಇದೆ; ಆ ರೀತಿ ದೇವರಿಗೆ ಸೇರಿದ ಜಮೀನಿದೆ. ಈ ಜಮೀನನ್ನು ಯಾವ ರೀತಿಯಾಗಿ ಇದುವರೆಗೆ ವ್ಯವಸಾಯ ಮಾಡಿಕೊಂಡು ಬಂದಿದ್ದಾರೆಂದು ವಿಮರ್ಶೆಮಾಡುವುದು ಕೂಡ ಸೂಕ್ತವಾದುದೆಂದು ಭಾವಿಸುತ್ತೇನೆ. ಇದರಲ್ಲಿ ಬಹಳ ಭಾಗವೆಲ್ಲಾ ಖುಷ್ಕಿ ಜಮೀನೇ ದೇವಸ್ಥಾನಗಳಿಗೆ ಸೇರಿರುವುದೆಂದು ನಾನು ಧೈರ್ಯವಾಗಿ ಹೇಳಬಹುದು. ಎಲ್ಲೋ ಕೆಲವು ಕಡೆ ಅಲ್ಪಸ್ವಲ್ಪ ತರೀ ಜಮೀನು ಈ ದೇವಸ್ಥಾನಗಳಿಗೆ ಸೇರಿರಬಹುದು; ಹೆಚ್ಚು ಭಾಗ ಎಲ್ಲಾ ಖುಷ್ಕಿ. ಪ್ರತಿಯೊಂದು ಹಳ್ಳಿಯಲ್ಲೂ ಪಟೇಲ ಶ್ಯಾನುಭೋಗರುಗಳಿಗೆ, ಕುಳವಾಡಿಗಳಿಗೆ ಸಾರಿಗೆಯಿರುವ ಹಾಗೆ ಸರ್ವೇಸಾಧಾರಣವಾಗಿ ಈ ದೇವರ ಸಾರಿಗೆಗಳೂ ಇವೆ. ಇದನ್ನು ಯಾವ ಒಂದು ವ್ಯಕ್ತಿ ಕೂಡ ನನ್ನ ಜಮೀನೆಂದು ಹೇಳುವ ಹಾಗಿಲ್ಲ. ನಾನೂ ಕೂಡ ತಾಲ್ಲೂಕಾಫೀಸಿನಲ್ಲಿರುವ ರಿಕಾರ್ಡನ್ನು ಈ ಸಾರಿ ಊರಿಗೆ ಹೋದಾಗ ಪರಿಶೀಲಿಸಿದೆ. ಇದೆಲ್ಲಾ ಯಾವ ರೀತಿಯಲ್ಲಿದೆಯೆಂದರೆ ಆಯಾ ಊರಿನಲ್ಲಿರುವ ಬಸವೇಶ್ವರ, ಮಾದೇಶ್ವರ, ಮಾರಮ್ಮ, ಹನುಮಂತರಾಯ ಎಂಬ ದೇವರುಗಳ ಹೆಸರಿನಲ್ಲಿ ರಿಜಿಸ್ಟರಿನಲ್ಲಿ ನಮೂದಾಗಿವೆ. ಇದನ್ನು ಹಿಂದೆ ಒಂದು ಜೋಡಿಯೆಂದು ಪರಿಗಣಿಸಿ ಸರ್ಕಾರದವರು ಕಂದಾಯ ವಸೂಲುಮಾಡುತ್ತಿದ್ದರು. ಇದಕ್ಕೆ ಕಂದಾಯ ರೈತವಾರಿ ಪದ್ಧತಿಯಲ್ಲಿರುವ ಹಾಗೆ ಇಲ್ಲದಿದ್ದರೂ ರೈತವಾರಿ ಪದ್ಧತಿಯಲ್ಲಿ ಒಂದು ಎಕೆರೆಗೆ ಒಂದು ರೂಪಾಯಿದ್ದರೆ ಇಲ್ಲಿ ನಾಲ್ಕಾಣೆ ಅಥವಾ ಎರಡಾಣೆಯಿತ್ತು. ಇದನ್ನು ಸುಮಾರು 1890 ರಲ್ಲೋ ಏನೋ ಜ್ಞಾಪಕವಿಲ್ಲ--ಅಂತೂ ಆ ಭಾಗದಲ್ಲಿ ಪುನಃ ರಿಪೈಜ್‌ಮಾಡಿ ಕ್ಲೈಟ್‌ರೆಂಟ್ ಎಂದು ಕರೆದು ಸ್ವಲ್ಪ ಹೆಚ್ಚಿಸಿದ್ದಾರೆ. ಈ ಕ್ಲೈಟ್‌ರೆಂಟ್ ಅಥವಾ ಜೋಡಿ ಕೊಟ್ಟುಕೊಂಡು ಬರುವವರು ಯಾರೇ ಆದರೂ ಆಯಾ ಗ್ರಾಮದಲ್ಲಿರುವ ಗ್ರಾಮಸ್ಥರೆಲ್ಲರೂ ಸೇರಿ ಪೂಜಾರಿಯನ್ನು ನೇಮಕ ಮಾಡಿದ್ದಾರೆ. ಈ ಪೂಜಾರಿಗಳಲ್ಲಿ ಮುಕ್ಕಾಲುಭಾಗ ಜನರು ತಾವೇ ಸ್ವಂತವಾಗಿ ವ್ಯವಸಾಯ ಮಾಡುತ್ತಾರೆ. ಅವರು ದೇವಸ್ಥಾನದ ಜಮೀನು ವ್ಯವಸಾಯ ಮಾಡಿಕೊಂಡು ಅದಕ್ಕೆ ಸರ್ಕಾರದವರು ನಮೂದಿಸಿರುವ ಕ್ಲೈಟ್‌ರೆಂಟ್ ಅಥವಾ ಜೋಡಿಯನ್ನು ವರ್ಷೇ ವರ್ಷೇ ಕೊಟ್ಟು ಹೈಸಲುಮಾಡಿ ದೇವರಪೂಜೆ ಮಾಡಿಕೊಂಡು ಬರುತ್ತಿದ್ದಾರೆ. ಈಗ ನೀವೇನಾದರೂ ಈ ಇನಾಂ ರದ್ದಾಗಬೇಕೆಂದು ಹೇಳಿದರೆ ಯಾರಿಗೆ ಈ ಜಮೀನು ಕೊಡಬೇಕೆಂಬ ಒಂದು ಪ್ರಶ್ನೆ ಉದ್ಭವಿಸುತ್ತದೆ. ತಾವು ಪರ್ಮನೆಂಟ್ ಟೆನೆಂಟುಗಳಿಗೆ ಈ ಜಮೀನು ಕೊಡುತ್ತೇವೆಂದು ಹೇಳಿದ್ದೀರಿ. ಆದರೆ ತಮ್ಮ ಬಿಲ್ಲಿನಲ್ಲಿ ಹೇಳಿರುವುದು ನನಗೆ ಸರಿಯಾಗಿ ಅರ್ಥವಾಗಿಲ್ಲ. ಪರ್ಮನೆಂಟ್ ಟೆನೆಂಟೆಂದರೇನೆಂಬುದನ್ನು ಲ್ಯಾಂಡ್ ರೆವೆನ್ಯೂ ಕೋಡಿನ 79 ನೆಯ ಸೆಕ್ಷನ್‌ನಲ್ಲಿ ಹೇಳಿದೆ. ಇನಾಂದಾರರಿಗೆ ಯಾರು ಕಂದಾಯ, ಫಿಕ್ಸೆಡ್‌ರೆಂಟನ್ನು ಇಪ್ಪತ್ತು ವರ್ಷ either in kind or

(ಶ್ರೀ ಕೆ. ಪ್ರಭಾಕರ್.)

in coin--ದುಡ್ಡಿನ ರೂಪದಲ್ಲಿ ಅಥವ ದವಸದ ರೂಪದಲ್ಲಿ 12 ವರ್ಷಗಳಿಗೆ ಮೇಲ್ಪಟ್ಟುಕೊಟ್ಟಿದ್ದರೋ ಅವರು ಪರ್ಮನೆಂಟ್ ಟೆನೆಂಟ್ ಎಂದು ಹೇಳುತ್ತಾರೆ. ಪೂಜಾರಿಯು ಪರ್ಮನೆಂಟ್ ಟೆನೆಂಟೆ ಅಥವ ಕ್ಯಾಸಿ ಪರ್ಮನೆಂಟ್ ಟೆನೆಂಟೆ ಅಥವಾ ಖದೀಂ ಟೆನೆಂಟೆ, ಹೇಗೆ ಎಂಬುದನ್ನು ನಾನು ತಿಳಿಯುವುದಕ್ಕೆ ಸಾಧ್ಯವಾಗಲಿಲ್ಲ. ಏಕೆಂದರೆ ದೇವರ ಹೆಸರಿನಲ್ಲಿ ಕಂದಾಯ ತೆಗೆದುಕೊಳ್ಳುವುದಿಲ್ಲ, ಫಿಕ್ಸೆಡ್‌ರೆಂಟ್ ತೆಗೆದುಕೊಳ್ಳುವುದಿಲ್ಲ, ದೇವರ ಹೆಸರಿನಲ್ಲಿರುವ ಖಾತೆಗೆ ಸರ್ಕಾರಕ್ಕೆ ಹಣ ಕಟ್ಟುತ್ತಿದ್ದಾನೆ. ತಮ್ಮ ಅಭಿಪ್ರಾಯ ಹೇಗಿದೆ, ಈ ಎಲ್ಲಾ ಜಮೀನನ್ನೂ ಪೂಜಾರಿಗಳಿಗೇ ಕೊಡಬೇಕೆಂಬ ಮನಸ್ಸಿದೆಯೆ, ಎಂಬುದನ್ನು ಸ್ವಲ್ಪ ವ್ಯಕ್ತಪಡಿಸಬೇಕು. 2,66,339 ಎಕರೆ ಜಮೀನಿನಲ್ಲಿ ಸುಮಾರು $\frac{1}{4}$ ಭಾಗ ಮಾತ್ರ ಪರ್ಮನೆಂಟ್ ಮತ್ತು ಖದೀಂ ಟೆನೆಂಟುಗಳಿಗೆ ಹೋಗುತ್ತದೆಂದು ತಾವು ಬಲ್ಲಿನಲ್ಲಿ ಹೇಳಿದ್ದೀರಿ. ಬಾಕಿ ಉಳಿದ ಜಮೀನನ್ನು ಪೂಜಾರಿಗಳಿಗೆ ಕೊಡುತ್ತೀರಾ ಅಥವಾ ಹರಾಜು ಮಾಡುತ್ತೀರಾ ಎಂಬುದು ಗೊತ್ತಾಗಿಲ್ಲ. ಒಂದುವೇಳೆ ಹರಾಜು ಮಾಡಬೇಕಾದರೆ ಈಗತಾನೆ ಸ್ವಲ್ಪ ದಿವಸಗಳ ಕೆಳಗೆ ಕಾನೂನು ಮಾಡಿ ಜಮೀನನ್ನು ಇನ್ನು ಮೇಲೆ ಹರಾಜು ಮಾಡುವುದಿಲ್ಲ, ಇಲ್ಲದವರಿಗೆ ಕೊಡುತ್ತೇವೆ ಎಂದು ಹೇಳಿದೆ. ಹಾಗಿರುವಾಗ ಏನುಮಾಡುತ್ತೀರೆಂದು ಗೊತ್ತಾಗಿಲ್ಲ. ಇದರಿಂದ ಆದಾಯವೇನು ಬರಬೇಕೆಂದು ಹೇಳುತ್ತೀರೋ ಅದು ಎಷ್ಟುಮಟ್ಟಿಗೆ ಬರುತ್ತದೆಂಬುದು ಅರ್ಥವಾಗುವುದಿಲ್ಲ. ಒಂದುವೇಳೆ ತಾವು ಈ ಜಮೀನನ್ನು, ದೇವರ ಹೆಸರಿನಲ್ಲಿರುವ ಜಮೀನನ್ನು ಯಾವ ಪೂಜಾರಿಯು ತಾನೇ ಸ್ವತಃ ವ್ಯವಸಾಯ ಮಾಡುತ್ತಿದ್ದಾನೋ, ಯಾರು ಅನುಚಾನವಾಗಿ ಅನುಭವಿಸಿಕೊಂಡು ಬಂದಿದ್ದಾನೋ ಅಂಥವನಿಗೇ ಕೊಡುತ್ತೇವೆಂದು ಹೇಳುವುದಾದರೆ, ಆತನನ್ನೇ ರಿಜಿಸ್ಟರ್ಡ್ ಆಕ್ಯುಪೆಂಟೆಂದು ಮಾಡುತ್ತೇವೆಂದು ಹೇಳುವುದಾದರೆ, ಆ ದೇವಸ್ಥಾನ ಕಾಲಾನುಗತವಾಗಿ ಹಾಳುಬಿದ್ದ ಹಾಗೆ. ಏಕೆಂದರೆ ಇದುವರೆಗೆ ಹಳ್ಳಿಯಲ್ಲಿರುವ ಪದ್ಧತಿ ಯಾವಾಗಲಾದರೂ ಒಬ್ಬ ಪೂಜಾರಿ ಪೂಜೆ ಸರಿಯಾಗಿ ಮಾಡದಿದ್ದರೆ ಊರಿನವರೆಲ್ಲಾ ಸೇರಿ ಅವನನ್ನು ತೆಗೆಯುತ್ತಿದ್ದರು. ಸರ್ಕಾರದ ಲ್ಯಾಂಡ್‌ರೆವೆನ್ಯೂ ಕೋಡಿನಲ್ಲಿ ಮತ್ತು ಲ್ಯಾಂಡ್‌ರೆವೆನ್ಯೂ ಮ್ಯಾನ್ಯುಯಲ್‌ನಲ್ಲಿ ಕೂಡ ಇಂಥ ಸಂದರ್ಭಗಳಲ್ಲಿ ಏನುಮಾಡಬೇಕೆಂಬುದನ್ನು ಹೇಳಿದೆ. ಸರಿಯಾಗಿ ಪೂಜೆಮಾಡದಿದ್ದರೆ, ಊರಿನವರು ಹೇಳಿದ ಕೆಲಸಕಾರ್ಯ ಅವರ ಅಭಿಪ್ರಾಯದ ಪ್ರಕಾರ ನಡೆಸದಿದ್ದರೆ ಅಂಥ ಪೂಜಾರಿಗಳನ್ನು ರದ್ದು ಮಾಡಿ ಅವರ ವಂಶಸ್ಥರಿಗೆ ಅಥವಾ ಬೇರೆಯವರಿಗೆ ಪೂಜಾರಿಕೆ ಹಕ್ಕನ್ನು ಕೊಡಲು ಸರ್ಕಾರಿ ಕಾನೂನು ಕೂಡ ಇದೆ. ಈಗ ಕೆಲವು ಕಡೆ ನನಗೆ ಗೊತ್ತಿರುವ ಹಾಗೆ ಪಟೇಲ ಶ್ಯಾನುಭೋಗರು, ಸ್ಥಳೀಯ ಅಧಿಕಾರಿಗಳು ಮುಂತಾದವರನ್ನು ಕಟ್ಟಿಕೊಂಡು ದೇವರ ಹೆಸರಿನಲ್ಲಿರುವ ಖಾತೆಯನ್ನು ಪೂಜಾರಿಯು ತನ್ನ ಹೆಸರಿಗೆ ಮಾಡಿಕೊಂಡು ಜಮೀನು ಹೊಡೆದುಕೊಂಡು ತಾನು ಅನುಭವಿಸಿ ಕ್ರಯಮಾಡಿರುವ ಉದಾಹರಣೆ ಸಹ ಇದೆ. ಇದಕ್ಕೆ ಊರಿನವರು ಕಾರಣರಲ್ಲ, ಇದು ಊರಿನವರ ತಪ್ಪಲ್ಲ ; ಇದರಲ್ಲಿ ಬಹು ಭಾಗ ಸರ್ಕಾರದ ತಪ್ಪಿದೆ. ತಮ್ಮ ಅಧಿಕಾರಿಗಳು ದಾಕ್ಷಿಣ್ಯಕ್ಕೊಳಗಾಗಿ ಇಂಥ ಅವಕಾಶ ಕೊಟ್ಟಿರುವ ಸಂದರ್ಭಗಳು ಬಹಳವಾಗಿವೆ. ಏನೇ ಆಗಲಿ, ಪೂಜಾರಿಗಳಿಗೆ ಕೊಟ್ಟರೆ ಅವರು ಪೂಜೆಮಾಡುವ ಪ್ರಮೇಯವಿರುವುದಿಲ್ಲ. ಅವರು ನಾವೇಕೆ ಪೂಜಾರಿಕೆ ಮಾಡಬೇಕೆಂದು ಬಿಡುವ ಸಂದರ್ಭ ಕೂಡ ಇರುತ್ತದೆ. ಊರಿನವರು ಅಥವಾ ಸರ್ಕಾರದವರು ಅಧಿಕಾರ ಚಲಾಯಿಸಿ ರಿಜಿಸ್ಟರ್ಡ್ ಆಕ್ಯುಪೆಂಟ್ ಎಂದು ಮಾಡುವುದರಿಂದ ಪೂಜೆ ಮಾಡಬೇಕೆಂದು ಅವರ ಮೇಲೆ ಒಂದು ಕಾನೂನು ವಿಧಾಯಕ ಮಾಡುವುದಕ್ಕೆ ಸಾಧ್ಯವಿಲ್ಲ.

1-30 P.M.

ಹಾಗಾದರೆ ದೇವಸ್ಥಾನಗಳಲ್ಲಿ ಒಂದರಲ್ಲೂ ಪೂಜೆಯೇ ಇಲ್ಲದಂತಾಗುತ್ತದೆ. ನಾವು ಈ ದಿವಸ ಈ ತಸ್ದೀಕ್‌ಗಾಗಿ 18 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಮಾಡಿದ್ದೇವೆ, ಆದುದರಿಂದ ಆ ದೇವಸ್ಥಾನಗಳಲ್ಲಿ ನಡೆಯತಕ್ಕಂಥ ಪೂಜಾದಿ ಕಾರ್ಯಗಳಿಗೇನೂ ತೊಂದರೆ ಬರುವುದಿಲ್ಲವೆಂದು ತಾವು ಹೇಳಬಹುದು. ಸ್ವಾಮಿ, ಈಗಾಗಲೇ ಅನೇಕರು ವ್ಯಕ್ತಪಡಿಸಿರುವ ಹಾಗೆ ಮತ್ತು ನಾನು ತಿಳಿದುಕೊಂಡಿರುವ ಹಾಗೂ ನಮ್ಮ ಸ್ಟೇಟಿನಲ್ಲಿ ಸುಮಾರು 16-17 ಸಾವಿರ ಇನಾಂ ಗ್ರಾಮಗಳಿವೆ. ತಾವು ಈ ಗ್ರಾಮಗಳಲ್ಲಿರುವ ದೇವಸ್ಥಾನಗಳ ಪೂಜಾದಿ ಕಾರ್ಯಗಳಿಗಾಗಿ ಈ ದಿವಸ ಏನು ಆ 18 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಹೇಳಿದ್ದೀರೋ ಆ ಮೊಬಲಗಿನಲ್ಲಿ ಸುಮಾರು ಒಂದು ಲಕ್ಷ ರೂಪಾಯಿಗಳು ಈ ಶೃಂಗೇರಿ ಜಹಗೀರ್ ಒಂದಕ್ಕೇ ಸೇರಿಬಿಡುತ್ತದೆ. ಇನ್ನು ಉಳಿದ ಸಹಸ್ರಾರು ದೇವಾಲಯಗಳ ಖರ್ಚು ವೆಚ್ಚಕ್ಕೆ ತಾವು ಹಂಚಿಕೆ ಮಾಡುವುದರಲ್ಲಿ ವರ್ಷಕ್ಕೆ 100 ರೂಪಾಯಿಗಳು ಸಹ ಬರುವುದಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮತ್ತು ಮರಾಮತ್ತು ಶಾಖೆಗಳ ಮಂತ್ರಿಗಳು).—ಈಗ ಬರುತ್ತಿರುವುದೂ ಅಷ್ಟೆ.

ಶ್ರೀ ಡಿ. ದೇವರಾಜ ಅರಸ್.—ಸ್ವಾಮಿ, ಅದು ಆ ರೀತಿ ನಡೆಯುವುದಿಲ್ಲವೆಂಬುದನ್ನು ನಾನು ಥಾರೆಂಜ್ ಮಾಡುತ್ತೇನೆ. ಈಗ ಬೇಕಾಗಿದ್ದರೆ ನಾನೇ ಖುದ್ದಾಗಿ ಮಾನ್ಯ ರೆವೆನ್ಯೂ ಸಚಿವರನ್ನು ನಮ್ಮ ಸ್ಟೇಟಿನಲ್ಲಿರತಕ್ಕ ಯಾವುದೇ ಒಂದು ಹಳ್ಳಿಗೆ ಆಗಲಿ, ದೇವಸ್ಥಾನ ಇರತಕ್ಕಂಥ ಊರಿಗಾಗಲಿ ಕರೆದುಕೊಂಡು ಹೋಗಿ ತೋರಿಸುತ್ತೇನೆ. ಯಾವ ಗ್ರಾಮದಲ್ಲಿ ಹಾಗೆ ಒಂದು ದೇವಸ್ಥಾನಕ್ಕೆ 5 ಎಕರೆ ಜಮೀನುಗಳನ್ನು ಇನಾಂತಿಯಾಗಿ ಕೊಡಲಾಗಿದೆಯೋ ಅಂಥ ಗ್ರಾಮಕ್ಕೆ ಹೋಗಿ ನೋಡುವುದಾದರೆ ಆತನು ಆ ಜಮೀನಿನಲ್ಲಿ 10-15 ಪಲ್ಲ ದವಸ ದಾನ್ಯಗಳನ್ನೂ ಬೆಳೆದುಕೊಂಡು, ಅದರ ಜೊತೆಗೆ ಗ್ರಾಮದವರು ಕೊಡತಕ್ಕ ಸಹಾಯದಿಂದ ತನ್ನ ಸಂಸಾರವನ್ನು ಹೇಗೋ ಒಂದು ರೀತಿಯಲ್ಲಿ ನಡೆಸಿಕೊಂಡು ಬರುತ್ತಿದ್ದಾನೆ. ಅಂಥ ಮನುಷ್ಯನಿಗೆ ತಾವು ಈ ದಿವಸ ಆ ಭೂಮಿಗಳನ್ನು ಕಿತ್ತುಕೊಂಡು ಆ ಬಗ್ಗೆ 100 ರೂಪಾಯಿಗಳನ್ನು ಕೊಡುವುದರಿಂದಲೇ ಆತನ ವಿಶಿಷ್ಟ ಸಂಸಾರವೂ ಜರುಗುತ್ತದೆಂದು ತಾವೇನಾದರೂ ಭಾವಿಸಿದ್ದರೆ, ಇದೊಂದು ಭ್ರಾಂತಿ ಎಂದು ನಾನು ತಿಳಿಸಬೇಕಾಗುತ್ತದೆ. ಆದರೆ ಇದರ ಜೊತೆಗೆ ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಮತ್ತು ಶ್ರೀ ಕೆ. ಪಟ್ಟಾಭಿರಾಮಾರವರೂ ಈ ದಿವಸ ಸರ್ಕಾರದವರು ಈ ಬಗ್ಗೆ ಕೊಡಬೇಕೆಂದು ಉದ್ದೇಶಿಸಿರತಕ್ಕ ಈ 18 ಲಕ್ಷ ರೂಪಾಯಿಗಳೂ ಸಹ ಜಾಸ್ತಿಯಾಯಿತು, ಇದನ್ನು ಇನ್ನೂ ಕಡಮೆ ಮಾಡಬೇಕೆಂದು ಹೇಳಿದ್ದಾರೆ. ಇಷ್ಟೇ ಅಲ್ಲದೆ ತಮಗೆ ಈಗ ಹಣ ಕಾಸಿನ ಮುಗ್ಗಟ್ಟು ಬಂದಿರುವಾಗ ಬಡ್ಜೆಟ್ ಡಿಫಿಸಿಟ್ ಬಡ್ಜೆಟ್ಟಾಗಿರುವಾಗ ತಾವು ಹೀಗೆ ವರ್ಷೇ ವರ್ಷೇ ಈ ಬಾಬಿಗಾಗಿ 18-20 ಲಕ್ಷ ರೂಪಾಯಿ

ಗಳನ್ನು ಕೊಡುವುದಕ್ಕೂ ಕೂಡ ಅವಕಾಶವಿರುವುದಿಲ್ಲ. ನಾಳೆ ಒಂದು ವರ್ಷ ಕಾಲ ಹಾಗೆ ತಾವು ಇದರಿಂದೇನೂ ಅಡ್ಡಿ ಬರುವುದಿಲ್ಲ ಕೊಡೋಣವೆಂದು ಹೇಳಿದರೂ ಹೇಳ ಬಹುದು. ಇಲ್ಲವೇ ಪುನಃ ನಮ್ಮ ಹಣಕಾಸಿನ ಪರಿಸ್ಥಿತಿ ಉತ್ತಮಗೊಳ್ಳಲಿಲ್ಲ ಎಂದು ಹೇಳಿ ತಾವೇ ಇವನ್ನು ಬಿಟ್ಟುಬಿಡೋಣವೆಂದು ಹೇಳಿದರೂ ಹೇಳ ಬಹುದು. ಮುಂದಕ್ಕೆ ಇದು ಹೀಗೆ ನಡೆದು ಕೊಂಡು ಬರುತ್ತದೆಯೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ತಾವು ಏನೇ ಆಗಲಿ ಈಗ ಮಾಡಿರ ತಕ್ಕದ್ದೇ ನರಿಯಾಗಿದೆಯೆಂದು ಹೇಳುವ ಪಕ್ಷಕ್ಕೆ ಪ್ರತಿಯೊಂದು ಹಳ್ಳಿಯಲ್ಲೂ ಇರತಕ್ಕ ದೇವಸ್ಥಾನಗಳಿಗೆ ಯಾವ ಒಂದು ಪೂಜೆ ಪುನಸ್ಕಾರಗಳೂ ಇಲ್ಲದಂತಾಗಿ ಅವುಗಳೆಲ್ಲಾ ಹಾಳುಬಿದ್ದು ಹೋಗುತ್ತವೆ. ಹಾಗೆ ಅವು ಹಾಳಾಗಿ ಹೋದರೂ ಚಿಂತೆಯಿಲ್ಲ ಎಂಬ ಅಭಿಪ್ರಾಯವನ್ನಿಟ್ಟುಕ್ಕೊಂಡೇ ತಾವು ಈ ಮಸೂದೆಯನ್ನು ತಂದಿರುವಂತೆ ವ್ಯಕ್ತಪಡುತ್ತದೆ. ಆದರೆ ನನ್ನ ಅಭಿಪ್ರಾಯದಲ್ಲಿ ಸರ್ಕಾರದವರಿಗೆ ಹೀಗೆಲ್ಲಾ ಮಾಡಬೇಕೆಂಬ ಅಭಿವ್ಯಾಯವಿಲ್ಲ. ಖಂಡಿತವಾಗಿಯೂ ಇಂಥ ಉದ್ದೇಶ ಸರ್ಕಾರದವರಿಗೆ ಇರುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ನಾವೆಲ್ಲರೂ ಒಂದೇ ಸಮಾಜಕ್ಕೆ ಸೇರಿರತಕ್ಕವರು; ಈ ದೇವಸ್ಥಾನಗಳೆಲ್ಲಾ ನಮ್ಮ ಸಮಾಜದ ಮತ್ತು ನಮ್ಮ ಸಂಸ್ಥೆಗಳ ಒಂದು ಅಂಗವೆಂದು ಈಗಾಗಲೆ ನಾವೆಲ್ಲರೂ ಒಪ್ಪಿಕೊಂಡಿರುವುದರಿಂದ ತಮಗೇ ಒಂದು ಬೇರೆ ಅಭಿಪ್ರಾಯ ಈ ವಿಚಾರದಲ್ಲಿ ಇರುತ್ತದೆಯೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಈಗ ಇದರಲ್ಲಿ ಸೂಚಿಸಿರತಕ್ಕಂಥ ರೀತಿಯಲ್ಲೇ ನಾವು ಮುಂದುವರಿದರೆ ಇದರಿಂದ ಮುಂದಕ್ಕೆ ಇನ್ನೂ ಅನೇಕ ದುಷ್ಪರಿಣಾಮಗಳಾಗುತ್ತವೆ. ಆದರೆ ಈ ಓಲ್ಡ್ ಪ್ರಿಸ್ಟೀಜ್ ಏತಕ್ಕಿರಬೇಕು, ಇದು ಹೋದರೂ ಹೋಗಲಿ, ಪರವಾ ಇಲ್ಲ ಎಂದು ಕೆಲವರು ಹೇಳಬಹುದು. ಆದರೆ ಹಾಗೆ ಒಂದು ಅಭಿಪ್ರಾಯ ಕೊಡಲು ಕಾರಣವೇನೆಂದರೆ ನಮ್ಮ ಹರಿಜನಬಂಧುಗಳನ್ನು ಈ ದೇವಸ್ಥಾನಗಳೊಳಕ್ಕೆ ಕೆಲವು ಕಡೆ ಬಿಡದೆ ಹೋದುದರಿಂದ ಈ ದೇವ ಸ್ಥಾನಗಳೆಲ್ಲಾ ಒಂದು ಪಕ್ಷಕ್ಕೆ ಹೋದರೂ ಹೋಗಿಬಿಡಲಿ ಎಂಬ ಒಂದು ಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಂಡು ಕೆಲವರು ಹಾಗೆ ಹೇಳಿದ್ದರೂ ಹೇಳಿರಬಹುದು. ಆದರೆ ನಮ್ಮ ಸರ್ಕಾರದವರಿಗೆ ಇಂಥ ಯಾವ ಅಭಿಪ್ರಾಯಗಳೂ ಇರುವುದಿಲ್ಲ. ಹಾಗೊಂದುವೇಳೆ ನಮ್ಮ ಸರ್ಕಾರದವರ ಮನಸ್ಸಿನಲ್ಲೂ ಇಂಥ ಒಂದು ಅಭಿಪ್ರಾಯವಿರಬಹುದೆಂದು ಭಾವಿಸೋಣವೆಂದರೆ ಅಂಥಾದ್ದಕ್ಕೆ ಲೇಶಮಾತ್ರವೂ ಅವಕಾಶವಿಲ್ಲ. ಕಾರಣವೆನೆಂದರೆ ಅವರಿಗೆ ಅಂಥ ಒಂದು ಮನಸ್ಸಿದ್ದಿದ್ದರೆ ಈ ಹರಿಜನ ಬಂಧುಗಳನ್ನು ದೇವಾಲಯಗಳೊಳಕ್ಕೆ ಪ್ರವೇಶಿಸಲು ಬಿಡಬೇಕೆಂಬ ಬಗ್ಗೆ ಒಂದು ಚೆಂಪಲ್ ಎಂಟ್ರಿ ಎಂಬ ಮಸೂದೆಯನ್ನು ಪಾಸ್‌ಮಾಡಿಸಿ, ಅದನ್ನು ಒಂದು ಆಕ್ಟನ್ನಾಗಿ ಮಾಡಬೇಕೆಂದು ಅವರು ಮಾಡುತ್ತಲೇ ಇರಲಿಲ್ಲ ಆದರೆ ಇನ್ನೊಂದು ವಿಚಾರ ನೋಡೋಣವಾದರೆ—ಕೆಲವು ಗ್ರಾಮಗಳಲ್ಲಿ ಈ ಹರಿಜನ ಬಾಲಕರನ್ನು ಪಾಠಶಾಲೆಗಳಿಗೆ ಸೇರಿಸುತ್ತಿಲ್ಲ ಎಂದು ಭಾವಿಸೋಣ. ಅಂಥಾ ಸಮಯದಲ್ಲಿ ನಾವೇನು ಮಾಡುತ್ತೇವೆ? ಆ ಸ್ಥಳದಲ್ಲಿರತಕ್ಕ ಹತ್ತಾರು ಜನ ಮುಖಂಡರುಗಳನ್ನು ಸೇರಿಸಿ ಏನೋ ಒಂದು ರೀತಿಯಲ್ಲಿ ಲೆಕ್ಕಚಾರ ಮಾಡಿ, ಒಂದು ತೀರ್ಮಾನಕ್ಕೆ ಬಂದು ಆ ಮಕ್ಕಳನ್ನೆಲ್ಲಾ ಪಾಠಶಾಲೆಗೆ ಸೇರಿಸುವಂತೆ ಮಾಡುತ್ತೇವೆ. ಆದರೆ ಹೀಗೆ ಒಂದು ನ್ಯಾಯ ನಮ್ಮತವಾದ ಮಾರ್ಗವನ್ನೇ ಬಿಟ್ಟು ಬಿಟ್ಟು ಆ ಸ್ಕೂಲುಗಳನ್ನೇ ಕಿತ್ತುಹಾಕಿಬಿಡಿ ಎಂದು ಹೇಳುವುದಕ್ಕಾಗುತ್ತದೆಯೇ? ಇದು ಸಾಧ್ಯವಿಲ್ಲ. ಇದೇ ರೀತಿಯಾಗಿ ಈ ದಿವಸ ನಮ್ಮ ಊರುಗಳಲ್ಲೆಲ್ಲಾ ಇರತಕ್ಕಂಥ ದೇವಾಲಯಗಳನ್ನು ಇಂಥ ಒಂದು ಉದ್ದೇಶಕ್ಕಾಗಿ ಮುಚ್ಚುವಂತೆ ಮಾಡಬೇಕೆಂಬ ಅಭಿಪ್ರಾಯ ಸರ್ಕಾರದವರಿಗೆ ಎಂದಿಗೂ ಇರುವುದಿಲ್ಲ. ಈ ದಿವಸ ಯಾವ ಒಂದು ಊರಿನಲ್ಲಿರತಕ್ಕಂಥ ದೇವಸ್ಥಾನಗಳೂ ಒಂದೇ ಕೋಮಿನವರಿಗೆ ಸೇರಿರತಕ್ಕಂಥವುಗಳಾಗಿರುವುದಿಲ್ಲ. ಈಗ ಒಂದು ಮಾರಿ ದೇವಸ್ಥಾನವನ್ನೇ ತೆಗೆದುಕೊಳ್ಳೋಣ. ಈ ಮಾರೀ ಹಬ್ಬವನ್ನು ಮಾಡಬೇಕಾದರೆ ಈ ದಿವಸ ಕೂಡ ಊರಿನಲ್ಲಿರತಕ್ಕ ಪ್ರತಿಯೊಂದು ಕೋಮಿನವರೂ ಸೇರಿಕೊಂಡೇ ಅದನ್ನು ಮಾಡುತ್ತಿದ್ದಾರೆ. ಇಂಥ ಒಂದು ಪದ್ಧತಿ ನಮ್ಮಲ್ಲಿ ಅನೂಚಾನವಾಗಿ ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಆ ರೀತಿಯಾಗಿ ಎಲ್ಲರೂ ಏಕೀಭವಿಸಿ ಕೆಲಸಕಾರ್ಯಗಳನ್ನು ಮಾಡಿಕೊಂಡು ಬರುತ್ತಿದ್ದಾರೆ. ಹೀಗೆಲ್ಲಾ ಆಚರಣೆಯಲ್ಲಿ ನಡೆದು ಕೊಂಡು ಬರುತ್ತಿರುವಾಗ ತಾವು ಆ ಪೂಜೆ ಪುನಸ್ಕಾರಾದಿಗಳನ್ನು ಯಾವುದೋ ಒಂದು ಪಂಗಡಕ್ಕೆ ಸೇರಿರತಕ್ಕಂಥ ಜನಗಳೇ ನಡೆಸಿಕೊಂಡು ಬರುತ್ತಿದ್ದಾರೆಂದು ಹೇಳುವುದು ಅಷ್ಟು ಸರಿಯಲ್ಲ. ಅನೇಕ ಕಡೆಗಳಲ್ಲಿ ಕೇವಲ ಬ್ರಾಹ್ಮಣರೇ ಅಲ್ಲದೆ ಬ್ರಾಹ್ಮಣೇತರರೂ ಈ ಪೂಜಾ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಹಾಗೆ ಅವರು ಅಲ್ಲಿ ದೇವರ ಪೂಜಾದಿ ಇತ್ಯಾದಿ ಕಾರ್ಯಗಳನ್ನು ಮಾಡುತ್ತಿದ್ದಾಗ್ಲೂ ನಮ್ಮೆಲ್ಲರ ಸಂಗಡ ಅವರೂ ನಮ್ಮಂತೆ ರೈತಾಪಿಗಳಾಗಿದ್ದುಕೊಂಡು ಜೀವನ ಮಾಡತಕ್ಕವರಾಗಿದ್ದಾರೆ. ಆದರೆ ಎಲ್ಲೋ ಕೊಂಚ ಭಾಗ ಜನ ಮಾತ್ರ ಹಾಗೆ ಆ ಪೂಜಾದಿ ಕಾರ್ಯಗಳಿಂದಲೇ ಬರತಕ್ಕಂಥ ವರಮಾನದಿಂದಲೇ ಜೀವಿಸಿಕೊಂಡಿರುತ್ತಾರೆ. ಹೀಗೆ ಈ ದಿವಸ ಅಲ್ಲಿ ಪೂಜಾದಿ ಕೆಲಸಕಾರ್ಯಗಳನ್ನ ಮಾಡತಕ್ಕವರು ಆ ಗ್ರಾಮಗಳಲ್ಲಿ ಜನರಿಂದ ಬರುವಂಥ ವರಮಾನದಿಂದಲೂ ಮತ್ತು ತಮ್ಮ ದುಡಿಮೆಯಿಂದಲೂ ಜೀವನ ನಡೆಸಿಕೊಂಡು ಬರುತ್ತಿದ್ದಾರೆ. ಹೀಗಿರುವಾಗ ಸರ್ಕಾರದವರು ಈ ದಿವಸ ಆ ಇನಾಂ ಭೂಮಿಗಳನ್ನೆಲ್ಲಾ ಕಿತ್ತುಕೊಂಡು, ಆ ಜರ್ಮೀ ಮಾಡುತ್ತಿದ್ದವರನ್ನೆಲ್ಲಾ ಓಡಿಸಿಬಿಟ್ಟು, ಆ ಭೂಮಿಗಳನ್ನು ಬೇರೆಯವರಿಗೆ ಕೊಟ್ಟುಬಿಟ್ಟರೆ, ಇನ್ನು ಮುಂದಕ್ಕೆ ಆ ಭೂಮಿಗಳನ್ನು ಅನುಭವಿಸತಕ್ಕಂಥ ಜನಗಳು ಇತ್ತಲಾಗಿ ಸರ್ಕಾರದವರ ಅಧೀನಕ್ಕೂ ಸಿಕ್ಕದೆ ಅತ್ತ ಗ್ರಾಮಸ್ಥರ ಹತೋಟಿಗೂ ಒಳಪಡದೆ ಹೋಗಿ ಕಟ್ಟ ಕಡೆಗೆ ಆ ದೇವಸ್ಥಾನಗಳೆಲ್ಲಾ ಪಾಳುಬೀಳುವಂಥ ಪರಿಸ್ಥಿತಿ ಉಂಟಾಗುತ್ತದೆಂದು ನಾನು ಹೇಳುತ್ತೇನೆ. ಆದರೆ ಕಳೆದ ಶನಿವಾರದ ದಿವಸ ಶ್ರೀ ಕೆ. ಪಟ್ಟಾಭಿರಾಮರ್ಪರವರೂ ಮತ್ತು ಶ್ರೀ ವಿ. ವೆಂಕಟಪ್ಪನವರೂ ಇದೇ ಸಭೆಯಲ್ಲಿ ಭಾಷಣಮಾಡುತ್ತಿದ್ದಾಗ ನಾನು ಕೇಳಿದ ಕೆಲವು ಪ್ರಶ್ನೆಗಳ ಸಂದರ್ಭದಲ್ಲಿ ಅವರು ಇದನ್ನು ಪರಿಹರಿಸಲು ಉಚಿತವಾದಂಥ ಔಷಧಿ ಈ ಬಗ್ಗೆ ನೀವೇನು ಸೂಚಿತ್ತೀರಿ ಎಂಬುದಾಗಿ ಕೇಳಿದ್ದರು. ಅದಕ್ಕೆ ನಾನು ಈಗ ಇಷ್ಟೇ ಹೇಳುತ್ತೇನೆ: ಈಗ ಸರ್ಕಾರದವರು ತಿಳಿಸಿರುವ ಪ್ರಕಾರ ವರ್ಷಂಪ್ರತಿ ಈ 18 ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಖಂಡಿತ ಸಾಧ್ಯವಾಗುವುದಿಲ್ಲ. ಇದಕ್ಕಾಗಿ ಈ ಇನಾಂ ಭೂಮಿಗಳನ್ನೆಲ್ಲಾ ಸರ್ಕಾರದವರು ಕೊಂಡುಕೊಂಡು ಅವುಗಳನ್ನು ಆ ಪರ್ಮನೆಂಟ್ ಟೆನೆಂಟ್ಸ್‌ಗಳಿಗೆ ಲಾಭ ಬರುವಂತೆ

(ಶ್ರೀ ಡಿ. ದೇವರಾಜ ಅರಸ್.)

ಮಾರಾಟ ಮಾಡಿ ತನ್ಮೂಲಕ ಬರುವ ಹಣದಲ್ಲಿ ಕೊಡುವಂತೆ ಮಾಡಿದರೆ ಸಾಧ್ಯವಾಗುತ್ತದೆಯೆಂದು ಕೆಲವರು ಹೇಳಬಹುದು. ಆದರೆ ನನ್ನ ಉದ್ದೇಶ ಅದೂಕೂಡ ಅಲ್ಲ. ಅದೂ ಸಹ ಸಾಧ್ಯವಿಲ್ಲವೆಂದೇ ಹೇಳುತ್ತೇನೆ. ನಾನು ಹೇಳುವುದೇನೆಂದರೆ ಈ ಹಿಂದೆ ಸರ್ಕಾರದವರು ಆ ಪರ್ಸನಲ್ ಮತ್ತು ಮಿಸಿಲೇನಿಯಸ್ ಇನಾಂತಿಗಳನ್ನು ರದ್ದುಮಾಡಬೇಕೆಂದು ಹೇಳತಕ್ಕಕಾಲದಲ್ಲಿ ಅವುಗಳನ್ನೆಲ್ಲಾ ಯಾವ ರೀತಿ ರದ್ದುಮಾಡಬೇಕೆಂದು ಹೇಳಿದ್ದಾರೋ ಅದೇ ಮಾದರಿಯಲ್ಲಿ ಇಲ್ಲಿಯೂ ಸಹ ಮಾಡಬೇಕೆಂದು ಹೇಳುತ್ತೇನೆ. ಆದರೆ ಸರ್ಕಾರದವರು ಅವರಿಗೇ ಒಂದು ರೀತಿಯಾಗಿ ಕೊಡೋಣ, ಇವರಿಗೇ ಒಂದು ರೀತಿಯಾಗಿ ಕೊಡೋಣ ಎಂಬುದಾಗಿ ಹೇಳುತ್ತಿರುವುದು ಸರಿಯಾದ್ದಲ್ಲ ಎಂದು ನಾನು ಹೇಳುತ್ತೇನೆ. ಹೀಗೆ ಮಾಡತಕ್ಕದ್ದನ್ನು ನಾನು ಖಂಡಿತ ಒಪ್ಪುವುದಿಲ್ಲ. ಅಲ್ಲಿ ನಾವು ಆ ಖದೀಂ ಟೆನೆಂಟ್ಸ್ ಮತ್ತು ಪರ್ಮನೆಂಟ್ ಟೆನೆಂಟ್ಸ್‌ಗಳಿಗೆ ಯಾವ ರೀತಿಯಾಗಿ ಮಾಡಿದ್ದೇವೊ ಅದೇ ರೀತಿಯಾಗಿ ಇಲ್ಲಿಯೂ ಮಾಡಬೇಕೆಂದು ಹೇಳುತ್ತೇನೆ. ಆದರೆ ಹೀಗೆ ಮಾಡದೆ ಸರ್ಕಾರದವರು ಇದನ್ನು ಏನೋ ಒಂದು ರೀತಿಯಲ್ಲಿ ತೀರ್ಮಾನ ಮಾಡಿಬಿಟ್ಟು ಈ ಪೂಜೆ ಇತ್ಯಾದಿ ಕಾರ್ಯಗಳಿಗೆಲ್ಲಾ ಒಂದು ತಸ್‌ದೀಕ್ ಕೊಡೋಣವೆಂದು ತಿಳಿಸಿದ್ದಾರೆ. ಆದರೆ ನಾನು ಈಗ ಹೇಳುತ್ತಿರುವುದು ಇದು ಸಾಕಾಗುವುದಿಲ್ಲ, ಎಂದು. ಇದಕ್ಕಾಗಿ ನಾನು ಮಾಡತಕ್ಕ ಸಲಹೆಯೇನೆಂದರೆ: ಈ ದೇವರ ಪೂಜಾದಿ ಕಾರ್ಯಗಳಿಗೆ ಪ್ರತಿಯೊಂದು ದೇವಸ್ಥಾನಕ್ಕೂ 25 ಎಕರೆ ಭೂಮಿಯನ್ನು ಬಿಟ್ಟುಬಿಡೋಣ ಎಂದು. ಈಗ ಇರತಕ್ಕ ಇನಾಂ ಭೂಮಿಗಳಲ್ಲಿ ಹೀಗೆ 25 ಎಕರೆಗಳನ್ನು ಬಿಟ್ಟು ಬಿಟ್ಟು ಉಳಿದುದನ್ನೆಲ್ಲಾ ಸರ್ಕಾರದವರು ತೆಗೆದುಕೊಳ್ಳಬಹುದು. ಹೀಗೆ ಮಾಡುವುದಾದರೆ ಇದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ಹಾಗೆ ಬಿಡತಕ್ಕಂಥ ಜಮೀನುಗಳನ್ನೆಲ್ಲಾ ದೇವರ ಹೆಸರಿನಲ್ಲೇ ಖಾತೆಗಳನ್ನು ಇಟ್ಟುಬಿಡಬಹುದು. ಆಗ ಇದೂ ಕೂಡ ಒಂದು ತರಹೆಯ ರೈತವಾರಿ ಸಿಸ್ಟಂ ಇದ್ದಂತೆ ಇರುತ್ತದೆ. ಹೀಗೆ ಮಾಡಿದರೆ ಇನಾಂ ಭೂಮಿ ಎಂಬ ಹೆಸರೂ ಹೋಗಿಬಿಡುತ್ತದೆ. ಆದರೆ ತಾವು ಇದಕ್ಕೆ ಬೇಕಾಗಿದ್ದರೆ ಇನ್ನೂ ಒಂದು ಹೆಚ್ಚಿನ ಸೌಲಭ್ಯ ಕೊಡಬಹುದು. ಬೇರೆ ರೈತರು ಏನು ಕಂದಾಯ ಕೊಡುತ್ತಾರೋ ಅದಕ್ಕಿಂತಲೂ ಕೊಂಚ ಕಡಮೆ ಕಂದಾಯವನ್ನು ಬೇಕಾದರೂ ಹಾಕಬಹುದು. ಇಂಥ ಒಂದು ರಿಯಾಯಿತಿ ತೋರಿಸಿದರೂ ತೋರಿಸಬಹುದು. ಈ ಹಿಂದೆ ಆದರೂ ಈ ಜೋಡಿದಾರರಿಗೆ ಇದೇ ರೀತಿ, ಜೋಡಿ ಅಥವಾ ಕ್ವಿಟ್‌ರೆಂಟ್ ಎಂದು ತೆಗೆದುಕೊಳ್ಳುತ್ತಿದ್ದರು. ಆದರೆ ಈಗ ಇನಾಂ ಎಂಬ ಹೆಸರು ಹೊರಟುಹೋಗಿ ದೇವಸ್ಥಾನದ ಹೆಸರಿನಲ್ಲಿ ಖಾತೆ ಆಗುತ್ತದೆ, ಯಥಾಪ್ರಕಾರ ಕಂದಾಯ ಬೇನೋ ಸರ್ಕಾರಕ್ಕೆ ಬಂದೇ ಬರುತ್ತದೆ, ಈ ಇನಾಂಗಳನ್ನು ಸರ್ಕಾರದವರು ರದ್ದುಪಡಿಸಿದಂತೆಯೂ ಆಯಿತು. ಆಗ ನೀವೇನು ಇವುಗಳನ್ನು ಇನಾಂ ಭೂಮಿಗಳೆಂದು ಕರೆಯುತ್ತಿದ್ದಿರೋ ಅದನ್ನೇ ಈ ದಿವಸ ತಾವು ಬೇಕಾದರೆ ಒಬ್ಬ ಪೂಜಾರಿಯ ಹೆಸರಿನಲ್ಲಿ ಖಾತೆ ಇಡಬಹುದು ಅಥವಾ ತಪ್ಪಿದರೆ ದೇವರ ಹೆಸರಿನಲ್ಲಿ ಬೇಕಾದರೂ ಖಾತೆ ಇಡಬಹುದು. ಆದರೆ ಈ ಮಸೂದೆ ಇನ್ನೂ ಸೆಲೆಕ್ಟ್ ಸಮಿತಿಯ ಮುಂದೆ ಹೋಗತಕ್ಕದ್ದಾಗಿದೆ. ಆಗ ಅವರು ಈ ವಿಷಯಗಳನ್ನೆಲ್ಲಾ ಕೂಲಂಕಷವಾಗಿ ವಿಮರ್ಶೆಮಾಡಿ ಸೂಕ್ತ ತೋರಿದ ರೀತಿಯಲ್ಲಿ ಈ ಭೂಮಿಯ ಪ್ರಮಾಣವನ್ನು ಸ್ವಲ್ಪ ಹೆಚ್ಚು ಕಡಮೆ ಬೇಕಾದರೂ ಮಾಡಿ 20 ಅಥವಾ 25 ಎಕರೆಗಳನ್ನೋ ಒಂದು ಕ್ಲುಪ್ತಮಾಡಿ ಪ್ರತಿಯೊಂದು ಹಳ್ಳಿಯಲ್ಲಿರತಕ್ಕ ದೇವಸ್ಥಾನದ ಪೂಜಾದಿ ಕಾರ್ಯಗಳು ಸಾಂಗೋಪಾಂಗವಾಗಿ ಜರಗುವಂತೆ ಒಂದು ಏರ್ಪಾಡನ್ನು ಮಾಡಬೇಕೆಂದು ಸೂಚಿಸುತ್ತೇನೆ.

ಅಂತು, ಒಟ್ಟಿನಲ್ಲಿ ಹಿಂದಿನಿಂದ ಬಂದಿರತಕ್ಕ ಪದ್ಧತಿಯ ಪ್ರಕಾರ ಪ್ರತಿಯೊಂದು ಹಳ್ಳಿಯಲ್ಲಿರತಕ್ಕ ದೇವಸ್ಥಾನದ ಪೂಜೆಗಳು ಸಾಂಗೋಪಾಂಗವಾಗಿ ನಡೆಯಬೇಕು, ಸರ್ಕಾರಕ್ಕೂ ಒಂದು ಹೊರೆಯಾಗಕೂಡದು. ತಾವೂ ಇಷ್ಟೊಂದು ದುಡ್ಡು ಹೆಚ್ಚಿಗೆ ಕೊಡುತ್ತೇವೆ, ಎನ್ನುವುದು ಅಥವಾ ಅವರು ಇಷ್ಟು ಕಡಮೆ ಕೊಡುತ್ತಾರೆ ಎನ್ನುವುದು–ಇಂಥ ಗೊಂದಲವೂ ಇರಕೂಡದು. ಈ ದೃಷ್ಟಿಯಿಂದ ದೇವರುಗಳ ಹೆಸರಿನಲ್ಲಿ ಪಟ್ಟೆಮಾಡಿದರೆ ಈ ಸಮಸ್ಯೆ ಬಹಳ ಸುಲಭವಾಗಿ ಬಗೆಹರಿಯತ್ತದೆಂದು ನಾನು ಭಾವಿಸುತ್ತೇನೆ.

ಇನ್ನೂ ಈ ಮಸೂದೆ ಸೆಲೆಕ್ಟ್ ಕಮಿಟಿಯ ಮುಂದೆ ಹೋಗುವುದಾಗಿರುವುದರಿಂದ ಇನ್ನೂ ಹೆಚ್ಚಿಗೆ ಕೂಲಂಕಷವಾಗಿ ಚರ್ಚೆ ಮಾಡುವುದಕ್ಕೆ ಅವಕಾಶವಿದೆಯೆಂದು ಕಾಣುತ್ತದೆ. ಆದ್ದರಿಂದ, ಸಧ್ಯದಲ್ಲಿ ನಾನಾಗಲೇ ತಿಳಿಸಿದಂತೆ, ಹೆಚ್ಚಾಗಿ ಹೇಳಲು ಇಷ್ಟಪಡುವುದಿಲ್ಲ. ಅಲ್ಲದೆ, ಅನೇಕ ಅಭಿಪ್ರಾಯಗಳು ಈಗ ಹೊರಬಿದ್ದಿವೆ. ಆದ್ದರಿಂದ ಇಷ್ಟು ಸಲಹೆಗಳನ್ನು ತಮ್ಮ ಮುಂದಿಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

[SRI S. SRINIVASA IYENGAR in the Chair.]

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ—ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ, ಈಗಾಗಲೇ ಸಭೆಯಮುಂದೆ ಸರ್ಕಾರದವರು ಮಂಡಿಸಿರತಕ್ಕ ಈ ಚಾರಿಟಬಲ್ ಇನಾಂ ರದ್ದಿಯಾತಿ ಮಸೂದೆಯ ವಿಚಾರದಲ್ಲಿ ಬಹಳ ಕೂಲಂಕಷವಾಗಿ ಚರ್ಚೆಯಾಗಿದೆ. ಹಾಲಿ ಇರತಕ್ಕಂಥ ದೇವಸ್ಥಾನ ಹಾಗೂ ಮಠಗಳಿಗೆ ಸೇರಿದಂಥ ಜಮೀನನ್ನು ಸರ್ಕಾರದವರು ತೆಗೆದುಕೊಂಡು ಅದನ್ನು ರೈತರಿಗೆ ಹಂಚಬೇಕೆಂಬ ಉದ್ದೇಶವನ್ನಿಟ್ಟುಕೊಂಡು ಈ ಮಸೂದೆಯನ್ನು ಸರ್ಕಾರದವರು ಮಂಡಿಸಿದ್ದಾರೆ. ಈ ಮಸೂದೆಗೊಳಪಟ್ಟ ಜಹಗೀರಿಗಳಲ್ಲಿ ಮುಖ್ಯವಾದ್ದು, ಬಹಳ ದೊಡ್ಡದಾಗಿರುವುದು ಶೃಂಗೇರಿ ಜಹಗೀರಿ. ಇದರ ಬಗ್ಗೆ ಬಹಳವಾಗಿ ಜನರಲ್ಲಿ ಕುತೂಹಲ ಉಂಟಾಗಿದೆ. ಇದರ ವಿಚಾರದಲ್ಲಿ ನಾನು ಒಂದು ಮಾತು ಹೇಳಬೇಕಾಗಿದೆ.

ಈ ಮಠಗಳು ಬಹಳ ಹಿಂದಿನಕಾಲದಲ್ಲಿ ಸ್ಥಾಪಿತವಾಗಿ, ಅವು ಯಾವ ಉದ್ದೇಶಕ್ಕಾಗಿ ಸ್ಥಾಪಿಸಲ್ಪಟ್ಟವೋ ಆ ಉದ್ದೇಶ ನಡೆದುಕೊಂಡು ಹೋಗಲೆಂಬ ಆಶಯದಿಂದ ಅನೇಕ ರಾಜ ಮಹಾರಾಜರುಗಳು ಅವಕ್ಕೆ ಜಮೀನುಗಳನ್ನು ಕೊಡುತ್ತಾ ಬಂದರೆಂದು ಗೊತ್ತಾಗಿದೆ. ಈಗ ಅದು ಒಂದು ಘಟ್ಟವನ್ನು ಮುಟ್ಟಿದೆ. ಈ ಮಠಗಳು ತಮ್ಮ ಉದ್ದೇಶವನ್ನು ಸಾರ್ಥಕಗೊಳಿಸಿಕೊಂಡು ಈಗಲೂ ಆ ಕಾರ್ಯ ಕ್ಷೇತ್ರದಲ್ಲಿ ಅದಷ್ಟು ಕೆಲಸಮಾಡಿಕೊಂಡು ಬರುತ್ತಿವೆ.

ಈಗ ನಾವು ಪ್ರಜಾ ಸರ್ಕಾರದಲ್ಲಿದ್ದೇವೆ. ಪ್ರಜಾ ಸರ್ಕಾರದ ಆಡಳಿತ ನಮ್ಮ ದೇಶದಲ್ಲಿದೆ. ಅಂದಮೇಲೆ ಇಂದು ಪ್ರಜೆಗಳ ಅಭಿಪ್ರಾಯ ಯಾವ ರೀತಿಯಿದೆಯೋ ಆ ರೀತಿಗೆ ತಕ್ಕಂತೆ ಹಳೆಯ ಕಾಲದಿಂದ ನಡೆದುಕೊಂಡು ಬಂದಂಥ ಸಂಪ್ರದಾಯಗಳು ಬದಲಾಗಲೇ ಬೇಕು. ಹೀಗಿರುವಲ್ಲಿ, ಶೃಂಗೇರಿ ಮಠವನ್ನು ನೋಡುವುದಾದರೆ ಅಲ್ಲಿ ಅನೇಕ ಹಿಂದೂ ಜನಾಂಗದವರಿಗೆ ಹೋಗುವುದಕ್ಕೆ ಅವಕಾಶ

ಕೊಡುತ್ತಿಲ್ಲ. ಈ ರೀತಿಯಾಗಿ ಅವಕಾಶಕೊಡುತ್ತಿಲ್ಲವಾದುದರಿಂದ ಸರ್ಕಾರದವರು ಅಥವಾ ಸದಸ್ಯರು ಈ ಮಠಕ್ಕೆ ಸೇರಿದ ಜಮೀನುಗಳನ್ನು ತೆಗೆಯಬೇಕೆಂದು ಕೆಲವರು ಅಭಿಪ್ರಾಯವಿಟ್ಟುಕೊಂಡಿದ್ದಾರೆ. ಆ ರೀತಿಯಾದ ಅಭಿಪ್ರಾಯ ಒಂದುವೇಳೆ ಇದ್ದರೆ, ಅದು ಸತ್ಯಕ್ಕೆ ಬಹಳ ದೂರವಾದದ್ದು ಎಂದು ಹೇಳಬೇಕು. ಏಕೆಂದರೆ ಮಠಕ್ಕೆ ಜಮೀನು ಬಿಡುವುದು ಅಥವಾ ಬಿಡದಿರುವುದು ಬೇರೆ ಅಂಶಗಳನ್ನು ಅವಲಂಬಿಸಿದೆ. ಎರಡು ವಿಷಯಗಳನ್ನು ನಾವು ಪರ್ಯಾಲೋಚನೆಗೆ ತೆಗೆದುಕೊಂಡಿದ್ದೇವೆ. ಒಂದು ಮಠ, ಇನ್ನೊಂದು ಮಠಕ್ಕೆ ಸೇರಿದ ಜಮೀನು; ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಮಠಕ್ಕೆ ಸೇರಿದ ಜಮೀನುಗಳನ್ನು ಹಂಚಬೇಕೆಂಬುದು ನಮ್ಮ ಮುಖ್ಯ ಉದ್ದೇಶ. ಆದರೆ, ಈ ಜಮೀನುಗಳನ್ನು ತೆಗೆದುಕೊಳ್ಳುವುದರಿಂದ ಮಠ ಕ್ಕಾಗಲಿ, ಮಠವು ಅನುಸರಿಸುತ್ತಿರುವ ರೀತಿ, ಪದ್ಧತಿ, ಆಚರಣೆಗಳಿಗಾಗಲಿ ಯಾವರೀತಿಯ ಧಕ್ಕೆಯೂ ಉಂಟಾಗಕೂಡದು ಎಂಬುದೂ ನಮ್ಮ ದೃಷ್ಟಿಯಲ್ಲಿದೆ. ಮಠದ ಆಡಳಿತದಲ್ಲಿರುವ ಜಮೀನುಗಳು ಅಂದರೆ, ಜೋಡಿ ಜಮೀನುಗಳು ರೈತರಿಗೆ ನೇರವಾಗಿ ಸಲ್ಲಬೇಕು, ರೈತರು ಆ ಜಮೀನಿನ ಹಕ್ಕನ್ನು ಪಡೆಯಬೇಕು ಎಂಬುದು ನಮ್ಮ ಗುರಿ. ಸರ್ಕಾರವು ಯಾವಾಗ ಶೃಂಗೇರಿಯ ಮಠದ ಪೂಜೆ ಪುನಸ್ಕಾರ ಗಳಿಗೆ ಆಗುವ ಖರ್ಚನ್ನು ಕೊಡಲೊಪ್ಪಿಕೊಂಡಿದೆಯೋ ಆಗ್ಗೆ ಆ ಮಠದವರು ನಮ್ಮ ಉದ್ದೇಶವನ್ನು ತಪ್ಪಾಗಿ ತಿಳಿದುಕೊಂಡು ತಮ್ಮ ಜಮೀನನ್ನು ಕಿತ್ತುಕೊಳ್ಳುವುದು ಸರಿಯಲ್ಲವೆಂದು ಹೇಳುವುದಕ್ಕಾಗಲೀ, ಮಠವನ್ನು ಇಲ್ಲದಂತೆ ಮಾಡಬೇಕೆಂದು ಹೊರಟಿದ್ದಾರೆಂದು ಒಂದು ಭಯವನ್ನು ವ್ಯಕ್ತಪಡಿಸುವುದಕ್ಕಾಗಲೆ ಅವಕಾಶವಿಲ್ಲ.

ಶ್ರೀ ದೇವರಾಜ ಅರಸಿನವರು ಭಾಷಣ ಮಾಡುತ್ತಾ, ನುಮಾರು ಐದು ಎಕರೆ ಜಮೀನುಳ್ಳದೇವಸ್ಥಾನಗಳು 9,000ರವರೆಗೆ ಇವೆ; ಹೀಗೆ 5 ಎಕರೆಗೂ ಕಡಿಮೆ ಯಿರತಕ್ಕ ಜಮೀನುಗಳ ಒಡೆತನವನ್ನು ಹೇಗೆ ನಿರ್ಧರಿಸುವುದು, ಇದು ಬಹಳ ಕಷ್ಟವಾದ ಸಮಸ್ಯೆ ಎಂದು ಹೇಳಿದರು. ಆದರೆ ನನಗಾದರೋ ಒಂದು ವಿಷಯ ಈ ಸಂದರ್ಭದಲ್ಲಿ ನ್ಪಷ್ಟಪಡಿಸಬೇಕೆನಿಸುತ್ತದೆ. ದೇವರ ಹೆಸರಿನಲ್ಲಿ ಅನೇಕಕಡೆ ನಾನಾ ಕಥೆಗಳಿವೆ; ದೇವಸ್ಥಾನ ಗಳು ಅನೇಕ ವರ್ಷಗಳ ಕಾಲದಿಂದ ನಮ್ಮ ಹಿಂದೂ ದೇಶದಲ್ಲಿ ಬಹಳ ಪ್ರಸಿದ್ಧವಾಗಿವೆ. ಈ ದೇವಸ್ಥಾನಗಳು ಯಾವ ಕಾಲದಲ್ಲಿ ಕಟ್ಟಲ್ಪಟ್ಟವು ಎನ್ನುವುದು ನಮಗೆ ಅಷ್ಟಾಗಿ ಅಗತ್ಯವಿಲ್ಲದಿದ್ದರೂ, ಈ ದೇವಸ್ಥಾನಗಳು, ಮಠಗಳು–ಇವುಗಳ ಹಿನ್ನೆಲೆಯಲ್ಲಿ ಇರತಕ್ಕಂಥ ಒಂದು ಅಂಶವನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಹಿಂದೆ ಯಾವ ಕಾಲದಲ್ಲಿ ಒಂದು ಕೋಮಿಗಾಗಲಿ ಒಂದು ಜನಾಂಗಕ್ಕಾಗಲೀ ಬೇರೆ ಕಡೆಯಿಂದ ಒಂದು ಕಷ್ಟ ವುಂಟಾಗುತ್ತದೆ, ಹಾಗೂ ಆ ಜಾತಿಯೇ ನಿರ್ಮೂಲವಾಗುತ್ತದೆ ಎಂಬ ಭಯವು ಉಂಟಾಯಿತೋ, ಆಗ್ಗೆ ಈ ರೀತಿಯಾಗಿ ದೇವಸ್ಥಾನ, ಅಥವಾ ಮಠಗಳನ್ನು ಸ್ಥಾಪನೆಮಾಡಿಕೊಂಡು ಆ ಮಠಕ್ಕೆ, ದೇವಸ್ಥಾನಕ್ಕೆ ಸೇರಿದ ಮತದವರ ತಂಡವನ್ನು ಬೆಳೆಸಿಕೊಳ್ಳುವುದಕ್ಕೆ ಠಾಣಗಳನ್ನಾಗಿ ಮಾಡಿಕೊಂಡರೆಂದು ಹೇಳಿದರೆ ತಪ್ಪಾಗಲಾರದು. ನಾವೀಗ ಪ್ರಜಾ ಸರ್ಕಾರದಲ್ಲಿದ್ದೇವೆ; ಪ್ರತಿಯೊಬ್ಬ ವಯಸ್ಕನಿಗೂ ವೋಟು ಕೊಡತಕ್ಕ ಅಧಿಕಾರವನ್ನು ರಾಜ್ಯಾಂಗ ರೀತಿಯಾಗಿ ಒಪ್ಪಿಕೊಂಡಿದ್ದೇವೆ. ಅಂದಮೇಲೆ ಈಮಠಗಳ ಮತ್ತು ದೇವಸ್ಥಾನಗಳ ವಿಚಾರದಲ್ಲಿ ಯಾವುದಾದರೂ ಒಂದು ತತ್ವವನ್ನು ಅನುಸರಿಸಲೇ ಬೇಕು. ದೇವಸ್ಥಾನಗಳಿಗೆ ಹಾಗೂ ಮಠಗಳಿಗೆ ಜನಸಂಖ್ಯೆಯು ಹೆಚ್ಚಾಗಿಲ್ಲದ ಕಾಲದಲ್ಲಿ, ಜಮೀನಿನಮೇಲೆ ಹೆಚ್ಚಿನ ಒತ್ತಾಯವಿಲ್ಲದ ಕಾಲದಲ್ಲಿ, ರೈತರೇ ಹೆಚ್ಚಾಗಿಲ್ಲದ ಕಾಲದಲ್ಲಿ ರಾಜ ಮಹಾರಾಜರುಗಳು ಬೇಕಾದಷ್ಟು ಜಮೀನುಗಳನ್ನು ಅವುಗಳಿಗೆ ಮಾನ್ಯಗಳಾಗಿ ಬಿಟ್ಟುಕೊಟ್ಟರು. ಆದರೆ ಈಗ ಸಿರುದ್ಯೋಗದ ಸಮಸ್ಯೆ ದೇಶದ ಮುಂದಿದೆ. ರೈತರ ಕಡೆಯಿಂದ ಜಮೀನಿಗೆ ಒತ್ತಾಯ ದಿನೇ ದಿನೇ ಹೆಚ್ಚಾಗುತ್ತಿದೆ. ಈ ಅಂಶವನ್ನೀಗ ನಾವು ಬಹಳ ಮುಖ್ಯವಾಗಿ ಗಮನಪಲ್ಲಟ್ಟುಕೊಳ್ಳಬೇಕಾಗಿದೆ.

ಈಗ ಒಂದು ದೇವಸ್ಥಾನಕ್ಕೆ 4 ಎಕರೆ ಜಮೀನಿರುತ್ತದೆಂದು ಭಾವಿಸಿಕೊಳ್ಳೋಣ. ಈ ನಾಲ್ಕು ಎಕರೆ ಜಮೀನನ್ನು ಸರ್ಕಾರದವರು ಯಾವನಾದರೊಬ್ಬ ರೈತನಿಗೆ ಉಳಲಿಕ್ಕೆ ಕೊಟ್ಟಿದ್ದರೆ, ಆ 5 ವರ್ಷದ ಗುತ್ತಿಗೆ, ಜಮೀನನ್ನು ಕೊಟ್ಟ ಸರ್ಕಾರದವರಿಗೆ ಸೇರಬೇಕೇ ಅಥವಾ ಆ ದೇವಸ್ಥಾನದಲ್ಲಿ ಪೂಜೆಯನ್ನು ಮಾಡಿಕೊಂಡಿರತಕ್ಕ ಪೂಜಾರಿಗಳಿಗೆ ಸೇರಬೇಕೇ ಎಂಬುದು ಒಂದು ಜಿಜ್ಞಾಸೆ ಹುಟ್ಟತಕ್ಕ ಪ್ರಶ್ನೆಯಾಗಿದೆ. ಎಂದರೆ ಇಲ್ಲಿ ಮುಖ್ಯವಾಗಿ ಯೋಚನೆ ಮಾಡಬೇಕಾದದು ಒಂದು ವಿಚಾರವಿದೆ, ಸರ್ಕಾರದವರು Permanent Tenant, Quasi-permanent Tenant ಎಂದು ಏನು ಈ ಮಸೂದೆಯಲ್ಲಿ ಕಾಣಿಸಿದ್ದಾರೋ.....

ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—Quasi-permanent Tenant ಇದರಲ್ಲಿಲ್ಲ.

ಶ್ರೀ ಬಿ. ಟಿ. ಕೆಂಪರಾಜ್.—Khadim Tenants ಇವರ ವಿಚಾರವಾಗಿಯೂ ನಾವು ಯೋಚನೆ ಮಾಡ ಬೇಕು. ಪೂಜಾರಿಗಳ ವಿಚಾರ, ಜಮೀನನ್ನು ಗುತ್ತಿಗೆಗೆ ತೆಗೆದುಕೊಂಡು ಬೇಸಾಯ ಮಾಡುವವನ ವಿಚಾರ, ಪರ್ಮನೆಂಟ್ ಟೆನೆಂಟ್ ಮತ್ತು ಕ್ವಾಸಿ ಪರ್ಮನೆಂಟ್ ಟೆನೆಂಟ್ ಈ ನಾಲ್ಕು ಜನರ ವಿಚಾರವನ್ನೂ ಪರೀಕ್ಷಿಲಿಸುವುದಾದರೆ, ಇದು ಬಹಳ ಕಠಿಣವಾದ ಪ್ರಸಂಗವಾಗುತ್ತದೆ. ಇಲ್ಲಿ ಜಮೀನು ಯಾರ ಸುಪರ್ದಿಗೆ ಸೇರಬೇಕು, ಜಮೀನಿನ ಹಕ್ಕು ಯಾರಿಗೆ ಸೇರಬೇಕು. ಎಂಬ ಪ್ರಶ್ನೆಯನ್ನು ಇತ್ಯರ್ಥಮಾಡುವಾಗ ಕಠಿಣ ಪ್ರಸಂಗವುಂಟಾಗಿ ಹಕ್ಕನ್ನು ಸ್ಥಿರಪಡಿಸಿಕೊಳ್ಳುವುದಕ್ಕಾಗಿ ಈ ರೈತರು ವಿಪರೀತ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಇದಕ್ಕೆ ಒಂದು ಸಲಹೆಯನ್ನು ಸರ್ಕಾರಕ್ಕೆ ಹೇಳಬಯಸುತ್ತೇನೆ. ಸರ್ಕಾರ ಎಲ್ಲಾ ಧಾರ್ಮಿಕ ಸಂಸ್ಥೆಗಳಿಗೂ ಕೊಟ್ಟಿರತಕ್ಕ ಹಕ್ಕನ್ನು ತೆಗೆದುಕೊಂಡು ಆಮೇಲೆ ನಿಜವಾಗಿ ಯಾರು ವ್ಯವಸಾಯವನ್ನು ಮಾಡುತ್ತಾರೋ, ಯಾರು ನಿಜವಾಗಿಯೂ ರೈತರಾಗಿ ಜೀವನ ನಡೆಸುತ್ತಾರೋ ಅಂಥವರಿಗೆ ಒಂದು ಪರಿಮಿತಿಯಲ್ಲಿ ಜಮೀನನ್ನು ಪುನಃ ಹಂಚುವುದರಿಂದ ಬಹಳ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ.

ಆ ಮೇಲೆ ದೇವಸ್ಥಾನಗಳ ಮತ್ತು ಮಠಗಳ ಕಾರ್ಯಕಲಾಪಗಳನ್ನು ನಡೆಸಿಕೊಂಡ ಹೋಗುವುದಕ್ಕೆ ಸರ್ಕಾರದವರು ಹಣವನ್ನು ಕೊಡುವುದಕ್ಕೆ ಮುಂದೆ ಬಂದಿರುವ ವಿಚಾರ. ಸ್ವಾಮಿ, 18 ಲಕ್ಷ ರೂಪಾಯಿಗಳ ನಷ್ಟ ಮೊತ್ತವನ್ನು ಸರ್ಕಾರದವರು ಒಂದು ಅಂದಾಜಿನ ಮೇಲೆ ಕೊಡುವುದಾಗಿ ಗೊತ್ತು ಮಾಡಿದೆ. ಈ 18 ಲಕ್ಷ ರೂಪಾಯಿಗಳು ಬಹುಶಃ ದೇವಸ್ಥಾನಗಳ ಮತ್ತು ಮಠಗಳ ಕೆಲಸಕಾರ್ಯಗಳನ್ನು ನಿರ್ವಹಿಸುವುದಕ್ಕೆ ಸಾಲುತ್ತದೆಯೋ ಇಲ್ಲವೋ ಗೊತ್ತಾಗುವುದಿಲ್ಲ. ಒಂದಂಶ ನಮಗೆ ಎದ್ದು ಕಾಣುತ್ತದೆ. ಅದೇನೆಂದರೆ, ಈ ದೇವಸ್ಥಾನಗಳು ಮತ್ತು ಮಠಗಳು ಬಹುಶಃ ಹಿಂದೂ ಸಂಸ್ಕೃತಿಯನ್ನು ಕಾಪಾಡುವುಕ್ಕಾಗಿ ಸ್ಥಾಪಿತವಾದವು. ಹಿಂದೂ ಸಂಸ್ಕೃತಿಯ ಜತೆಗೆ ಬಸವಣ್ಣನವರೂ ಸಹ ತಮ್ಮ

(ಶ್ರೀ ಬಿ. ಟಿ. ಕೆಂಪರಾಜ್.)

ಮತವನ್ನು ಸ್ಥಾಪಿಸುವುದಕ್ಕೆ ಬಂದರು. ಆ ಮೇಲೆ ಬಂದ ಇನ್ನೂ ಕೆಲವು ಮತಾಚಾರ್ಯರು ತಮ್ಮ ತಮ್ಮ ಮತಗಳನ್ನು ಸ್ಥಾಪಿಸಿಕೊಳ್ಳುವುದಕ್ಕೆ ಈ ದೇವಸ್ಥಾನಗಳು ಮತ್ತು ಮಠಗಳನ್ನು ಏರ್ಪಡಿಸಿಕೊಂಡರು. ಈಗ ಯಾರು ಬೇಕಾದರೂ ಅವರವರ ಧರ್ಮ, ನೀತಿ, ಮತವೇನಿದೆಯೋ ಅವುಗಳನ್ನು ಅನುಸರಿಸಲು ಅಭ್ಯಂತರವಿಲ್ಲ. ಆದರೆ ಸರ್ಕಾರ ಏಕೆ ಇಷ್ಟು ಹೆಚ್ಚಿನ ಹಣವನ್ನು ಖರ್ಚುಮಾಡಿ ಈ ಧರ್ಮಸಂಸ್ಥೆಗಳನ್ನು ಳಿಸಿಕೊಂಡು ಬರಬೇಕು ಎನ್ನುವುದು ನನಗೆ ತಿಳಿಯದಾಗಿದೆ. ಯಾರು ತಮ್ಮ ಪಂಥದಲ್ಲಿ ಅಭಿಮಾನವುಳ್ಳವರೋ, ತಮ್ಮ ಮತ ಸಾರೋದ್ಧಾರವಾಗಿ ಉಳಿಯಬೇಕೆಂದು ಇಚ್ಛಿಸುವರೋ, ಯಾರು ತಮ್ಮ ಮತವನ್ನು ಬಲಪಡಿಸಿಕೊಳ್ಳಬೇಕೆಂಬ ಧ್ಯೇಯವುಳ್ಳವರಾಗಿದ್ದಾರೋ ಅಂಥಾ ವ್ಯಕ್ತಿಗಳು ಅವರವರ ದೇವಸ್ಥಾನ ಮಠಗಳನ್ನು ನಡೆಸಿಕೊಂಡು ಹೋಗುವಕಾಲ ಸನ್ನಿಹಿತವಾಗಿದೆ. ಇದುವರೆಗೆ ಸರ್ಕಾರ ಈ ಮಠಗಳು ಮತ್ತು ದೇವಸ್ಥಾನಗಳಿಗೆ ಜೋಡಿ, ಇನಾಂತಿಗಳನ್ನು ಕೊಟ್ಟು ಉಳಿಸಿಕೊಂಡು ಬಂದು ಗುರುತರ ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಬಂದಿದೆ.....

ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರ) —ಮಾನ್ಯ ಸಭಾಪತಿಗಳಲ್ಲಿ ಒಂದು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ. ಕಳೆದ ಮೂರು ದಿವಸಗಳಿಂದಲೂ ಈ ಸಭೆ ಈ ಮಸೂದೆಯಮೇಲೆ ಮಾತನಾಡುತ್ತಿರುವ ಕಾಲದಲ್ಲಿ ಮಾನ್ಯ ರೆವೆನ್ಯೂ ಮಂತ್ರಿಗಳು ನಿಶ್ಯಕ್ತರಾಗಿದ್ದಾರೆ. ಆದುದರಿಂದ ಅವರಿಗೆ protection ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. CHAIRMAN (Sri S. Srinivasa Iyengar).—There is absolutely no point; Sr. Kemparaj may continue.

Sri Kadidal MANJAPPA.—The Minister is all right, Sir. (laughter!)

ಶ್ರೀ ಬಿ. ಟಿ. ಕೆಂಪರಾಜ್.—ಯಾವ ಸಂಸ್ಥೆಗಳು ಈ ಜಹಗೀರ್ ಮತ್ತು ಇನಾಮ್ ಹಕ್ಕನ್ನು ಅನುಭವಿಸಿಕೊಂಡು ಬಂದವೋ ಆ ಸಂಸ್ಥೆಗಳ ವಿಚಾರವನ್ನು ಸಹ ಕೂಲಂಕಷವಾಗಿ ಪರಿಶೀಲನೆಮಾಡಬೇಕಾಗಿದೆ. ಉದಾಹರಣೆಗೆ ಯಾವುದಾದರೂ ದೇವಸ್ಥಾನವನ್ನು ತೆಗೆದುಕೊಳ್ಳೋಣ. ಹಿಂದೂ ಜನಾಂಗದಲ್ಲಿ ಬಹುಶಃ ಎಷ್ಟು ಮತಗಳಿವೆಯೋ ಅದಕ್ಕಿಂತಲೂ ಹೆಚ್ಚಾಗಿ ದೇವಸ್ಥಾನಗಳೂ ದೇವರುಗಳೂ ಇವೆ. ಅಂದ ಮೇಲೆ, ದೇವರುಗಳು ಅಥವಾ ದೇವಸ್ಥಾನಗಳ ಮಟ್ಟಿಗೆ ಯೋಚಿಸುವುದಾದರೆ, ಪ್ರತಿಯೊಂದು ಸಂಸ್ಥೆಗೂ ನಾವು ಅವುಗಳ ಕಾರ್ಯಕಲಾಪಗಳು, ಪೂಜೆಪುರಸ್ಕಾರಗಳು ನಡೆಯಲು, ಮುಂದೆಯೂ ಕಾರ್ಯಕಾಲಾಪಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಹಣವನ್ನು ಕೊಡುತ್ತೇವೆ, ಖರ್ಚನ್ನು ನಾವೇ ವಹಿಸಿಕೊಂಡು ಹೋಗುತ್ತೇವೆ ಎಂದು ಹೇಳುವುದು ಎಷ್ಟುಮಟ್ಟಿಗೆ ಸಮಂಜಸ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಮಾನ್ಯ ಶ್ರೀ ದೇವರಾಜ ಅರಸಿನವರು, ದೇವಸ್ಥಾನಗಳಿಗೆ ಹರಿಜನರನ್ನು ಕೆಲವು ಕಡೆ ಬಿಡುತ್ತಿಲ್ಲವಾದುದರಿಂದ ಕೆಲವು ಮಾನ್ಯ ಸದಸ್ಯರು ಈ ರೀತಿ ಅಭಿಪ್ರಾಯವನ್ನು ಹೇಳುತ್ತಿದ್ದಾರೆಂದು ಹೇಳಿದರು. ಆದರೆ ಹರಿಜನರನ್ನು ದೇವಸ್ಥಾನಕ್ಕೆ ಬಿಡದೇಯಿದ್ದುದರಿಂದ ಈ ರೀತಿ ಹೇಳುತ್ತಿದ್ದಾರೆಂದು ಹೇಳತಕ್ಕ ಮಾತು ಒಪ್ಪುವ ಮಾತಲ್ಲ. ಈ ವಿಚಾರದಲ್ಲಿ ಒಂದಂಶವನ್ನು ನಾನು ಈ ಮಾನ್ಯ ಸಭೆಯ ಮುಂದಿಡಬೇಕೆಂದು ಬಯಸುತ್ತೇನೆ. ಪ್ರಪಂಚದಲ್ಲಿ ಎಷ್ಟು ಜಾತಿಗಳಿವೆಯೋ ಅಷ್ಟು ಜಾತಿಗಳಲ್ಲಿಯೂ ಒಂದು ಅವಕಾಶವಿದೆ. ಕ್ರಿಶ್ಚಿಯನ್ ಮತವನ್ನು ಉದಾಹರಣೆ ತೆಗೆದುಕೊಳ್ಳೋಣ. ಅವರ ಮತಕ್ಕೆ ಯಾರನ್ನಾದರೂ ಸೇರಿಸಿಕೊಳ್ಳುತ್ತಾರೆ. ಇದೇ ರೀತಿ ಮುಸಲ್ಮಾನ್ ಅಥವಾ ಮಹಮ್ಮದೀಯ ಮತವನ್ನು ತೆಗೆದುಕೊಳ್ಳೋಣ. ಆ ಮತಕ್ಕೂ ಯಾವ ಜನಾಂಗದವರನ್ನಾದರೂ ಸೇರಿಸಿಕೊಳ್ಳುತ್ತಾರೆ. ಆದರೆ ಹಿಂದೂ ಜನಾಂಗಕ್ಕೂ ಬಾಕಿ ಮತಗಳಿಗೂ ಇರುವ ವ್ಯತ್ಯಾಸವೇನೆಂದರೆ, ಒಂದು ಕೋಮಿನವರಾದರೂ ಅವರಲ್ಲೇ ನೂರಾರು ಪಂಗಡಗಳಿರುತ್ತವೆ. ಇಂಥಾ ಒಂದು ದಾರುಣಾವಸ್ಥೆಯಲ್ಲಿರುವ ಜನಾಂಗದ ಈ ಸ್ಥಿತಿಗೆ ಸರಿಯಾಗಿ ಇಷ್ಟು ದೇವಸ್ಥಾನಗಳೂ ಮತ್ತು ಇಷ್ಟು ಮತಗಳೂ ಇವೆ.

2 P.M.

ಆದುದರಿಂದ ಎಲ್ಲಿಯವರೆಗೆ ಇಷ್ಟು ವಿಪರೀತವಾಗಿ, ದಿನೇ ದಿನೇ ಬೆಳೆಸಿಕೊಂಡು ಬರುವ ಸಂಕುಚಿತ ಮನೋಭಾವಕ್ಕೆ ಎಡೆ ಆಗಿರತಕ್ಕಂಥ ವಿಷಯವನ್ನು ನಾವು ಇನ್ನೂ ಬೆಳೆಸಿಕೊಂಡು ಹೋಗುತ್ತೇವೆಯೋ ಅಲ್ಲಿಯವರೆಗೆ ದೇಶಕ್ಕೆ ಕೇಡು ಎಣಿಸಿದಂತಾಗುತ್ತದೆ. ನನ್ನ ಸ್ವಂತ ಅನುಭವದ ಒಂದು ವಿಚಾರವನ್ನು ಈ ಸಂದರ್ಭದಲ್ಲಿ ಬಹಳ ವ್ಯಸನದಿಂದ ಈ ಸಭೆಯ ಮುಂದೆ ತಿಳಿಸಬೇಕೆಂದಿದ್ದೇನೆ. ಕೆಲವು ತಿಂಗಳ ಹಿಂದೆ ಶ್ರೀರಂಗಪಟ್ಟಣಕ್ಕೆ ಮತ್ತು ಶೃಂಗೇರಿಗೆ ನಾನು ಮುಖ್ಯಮಂತ್ರಿಗಳ ಜೊತೆಗೆ ಹೋಗಬೇಕಾದ ಪ್ರಮೇಯ ಬಂತು. ಅಲ್ಲಿ ಮಠದ ಸಮೀಪಕ್ಕೆ ಹೋದಕೂಡಲೇ ಆ ಮಠಕ್ಕೆ ಸಂಬಂಧಪಟ್ಟ ವ್ಯಕ್ತಿಗಳು ನನ್ನನ್ನೂ ಹರಿಜನನೆಂದು ಭಾವಿಸಿ ದುರದುರನೆ ನೋಡಲು ಪ್ರಾರಂಭಿಸಿದರು, ಅವರು ನೋಡಿದ ರೀತಿ ನನ್ನನ್ನು ಮನುಷ್ಯ ವರ್ಗಕ್ಕೆ ಸೇರಿದವನೆಂದು ಭಾವಿಸಿದಂತೆ ಇರಲಿಲ್ಲ. ಯಾವ ಧರ್ಮ ಸಂಸ್ಥೆಗಳು ಲೋಕ ಕಲ್ಯಾಣವನ್ನುಂಟು ಮಾಡುವ ನಲುವಾಗಿ ಸ್ಥಾಪಿತವಾಗಿವೆಯೋ ಅಂಥ ಸಂಸ್ಥೆಗಳ ಆಧಿಪತ್ಯ ನಡೆಸತಕ್ಕವರು ವ್ಯಕ್ತಿ ದ್ವೇಷದಿಂದ ದೂರವಾಗಿರಬೇಕು. ಸಮಸ್ತರೂ ಒಂದೇ ಎಂಬ ಭಾವನೆ ಅವರಲ್ಲಿ ಬೆಳೆದು ಬರುವವರೆಗೂ ದೇಶಕ್ಕೆ ಕ್ಷೇಮವಿಲ್ಲ. ನಾವು ಯಾವ ಒಂದು ರಾಜ್ಯಾಂಗವನ್ನು ಒಪ್ಪಿಕೊಂಡು.....

Sri R. ANANTARAMAN (Chamarajapet).—Sir, I rise to a point of order.

Sri B. T. KEMPARAJ.—Sir, he is not in his seat, first.

Mr. CHAIRMAN.—Sri Anantaraman, you are not in your seat.

ಶ್ರೀ ಬಿ. ಟಿ. ಕೆಂಪರಾಜ್.—ಸ್ವಾಮಿ, ಈ ಜಹಗೀರಿಗಳನ್ನು ಕಿತ್ತುಕೊಂಡು ಧರ್ಮ ಸಂಸ್ಥೆಗಳ ಆಡಳಿತ ನಿರ್ವಹಣೆಗೇ ಕುಂದು ಮಾಡುವ ಅಭಿಪ್ರಾಯವನ್ನು ಕೆಲವರು ವ್ಯಕ್ತಪಡಿಸಿದರು. ಆ ರೀತಿಯ ಭಾವನೆಯನ್ನು ಎಂದಿಗೂ ತಳೆಯಬಾರದು. ಯಾವ ಒಂದು ಮಠವೇ ಆಗಲಿ, ದೇವಸ್ಥಾನವೇ ಆಗಲಿ, ಅದರ ಕಾರ್ಯ ಚಟುವಟಿಕೆ ಏನಿದೆಯೋ ಅದನ್ನು ನಡೆಸಿಕೊಂಡು ಬರುವುದಕ್ಕೆ ರಾಜ್ಯಾಂಗದಲ್ಲಿ ಪೂರ್ತಿ ಹಕ್ಕಿದೆ. ಅದರಂತೆಯೇ ಇವುಗಳಿಗೆ ಸೇರಿದ ಒಂದು ಸ್ವಂತ ಸ್ವತ್ತು ಎಂಬುದೇನಿದೆಯೋ ಅದನ್ನು ಸರ್ಕಾರವು ತೆಗೆದುಕೊಂಡು ಹತ್ತಾರು ಜನ ರೈತರಿಗೆ ಅನುಕೂಲವಾಗುವ ಒಂದು ದೃಷ್ಟಿಯನ್ನಿಟ್ಟುಕೊಂಡು ಕೆಲಸ ಮಾಡುವುದರಲ್ಲಿ ಯಾವ ಅಭ್ಯಂತರವೂ ಇಲ್ಲ. ಈ ರೀತಿ ಜಹಗೀರಿಗಳು, ಜೋಡಿಗಳು ಮತ್ತು ಧರ್ಮ ಸಂಸ್ಥೆಗಳಿಗೆ

ಸೇರಿದ ಜೋಡಿಗಳನ್ನು ಸರಕಾರದವರು ವಶಪಡಿಸಿ ಕೊಂಡರೆ, ರಾಜ್ಯಾಂಗದಲ್ಲಿ fundamental rights ಎಂದು ತಿಳಿಸಿರುವುದಕ್ಕೆ ಧಕ್ಕೆ ತಂದಂತಾಗುತ್ತದೆಂಬ ಶಂಕೆಯನ್ನು ಶ್ರೀಮಾನ್ ಪಟ್ಟಾಭಿ ರಾಮಾರವರು ಹೇಳಿದಂತೆ ತೋರಿತು.....

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ; ಅವರು compensation ವಿಚಾರ ಹೇಳಿದರು, ಅಷ್ಟೆ.

ಶ್ರೀ ಬಿ. ಟಿ. ಕೆಂಪರಾಜ್.—ಇನ್ನೊಂದು ವಿಚಾರವನ್ನು ಸರ್ಕಾರದ ಗಮನಕ್ಕೆ ತರಬೇಕೆಂದಿದೆ. ನಮ್ಮ ದೇಶದಲ್ಲಿ ಈಗ ಪ್ರತಿಯೊಂದು ಮೂಲೆ ಮೂಲೆಯಿಂದಲೂ ರೈತರು ಜಮೀನು ಬೇಕೆಂದು ಕೇಳತಕ್ಕ ಪರಿಸ್ಥಿತಿ ಉಂಟಾಗಿದೆ. ಅಂತೂ ದೇಶದ ಮುಂದೆ ಇರತಕ್ಕ ನಿರುದ್ಯೋಗ ಸಮಸ್ಯೆ ಈ ರೀತಿ ಸುಧಾರಣೆಗಳನ್ನು ತರುವುದರಿಂದ ಸ್ವಲ್ಪಮಟ್ಟಿಗೆ ಕಡಮೆ ಆಗಬಹುದು. ಒಟ್ಟಿನಲ್ಲಿ ಈ ರೀತಿ ಸಣ್ಣಪುಟ್ಟ ಬಿಲ್ಲುಗಳನ್ನು ತರವುದು ಸದ್ಯಕ್ಕೆ ಅನುಕೂಲವಾದರೂ ಮಾನ್ಯ ಮಂತ್ರಿಗಳು ಜಮೀನು ಸುಧಾರಣೆ ಬಿಲ್ಲಿನ ಬಗ್ಗೆ ಕೆಲವು ಮುಖ್ಯವಾದ ಸುಧಾರಣೆಯನ್ನು ತರುವುದು ಅಗತ್ಯ. ಈ ದಿನ ಜೆನೆರಲ್ ಆಕ್ಟ್, ನಾಳೆಯ ದಿನ Personal and Miscellaneous Inams Abolition Bill, ಅನಂತರ ಧರ್ಮ ಸಂಸ್ಥೆಗಳ ಜೋಡಿಯ ರದ್ದಿಯಾತಿ ಮನೂದೆ—ಈ ರೀತಿ ತರುವುದಕ್ಕಿಂತ, ಶ್ರೀಮಾನ್ ರಾಮರಾಯರು ಹೇಳಿ ನೇರವಾಗಿ ಯಾವರೀತಿಯಲ್ಲಾದರೂ ದೇಶಕ್ಕೆ ಅನುಕೂಲವಾಗುವ ಹಾಗೆ ಆಸ್ತಿ ಪಾಸ್ತಿಗಳ ಸುಧಾರಣೆ ತರುವುದು ಅವಶ್ಯಕ. ಅಂದಮೇಲೆ ಈ ಮಸೂದೆ ಜಾರಿಗೆ ಬಂದಮೇಲೆ ಖಡೀಂ ಜೆನೆಂಟ್, permanent tenant ಇವೆರಡು ಪಂಗಡದವರೂ ಸಣ್ಣಪುಟ್ಟ ಜೋಡೀದಾರರಾಗಿ ಪರಿಣಮಿಸಬಹುದು ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಈ ಮಸೂದೆಯಿಂದ ಮಧ್ಯವರ್ತಿ ವ್ಯಕ್ತಿಗಳಿಗೆ ಅಂದರೆ ಅವರ ಕೈಕೆಳಗೆ ಹಲವಾರು ರೀತಿಯ ವಹಿವಾಟನ್ನು ನಡೆಸುತ್ತಿರುವವ್ಯಕ್ತಿಗಳಿಗೆ ಯಾವರೀತಿಯ ಪರಿಹಾರ ದೊರೆಯುತ್ತದೆ ಎಂಬುದನ್ನು ಸೆಲೆಕ್ಟ್ ಕಮಿಟಿಯವರು ಯೋಚಿಸಬೇಕಾದುದು ಅಗತ್ಯ. ಈ ಜೋಡಿ ಮತ್ತು ಇನಾಂ ರದ್ದಿಯಾತಿ ಮಾಡುವಾಗ ಈ ಮಧ್ಯವರ್ತಿ ವ್ಯಕ್ತಿಗಳನ್ನು ಆದಷ್ಟು ಕಡಿಮೆ ಮಾಡುವುದು ಅತ್ಯಗತ್ಯ. ಇವರ ಜೊತೆಯಲ್ಲಿ ಯಾರು ಸಾಧ್ಯವಾದಷ್ಟು ಈ ವ್ಯಾಪಾರದಲ್ಲಿ ನಿರತರಾಗಿರುತ್ತಾರೆಯೋ ಅವರಿಗೆ ನೇರವಾಗಿ ಜಮೀನ್ ಸಲ್ಲತಕ್ಕಂಥಾದ್ದಕ್ಕೆ ಸರ್ಕಾರದವರು ಸರಿಯಾದ ಏರ್ಪಾಡುಗಳನ್ನು ಮಾಡಬೇಕೆಂದು ಹೇಳಿ, ಈ ಸಭೆಯಮುಂದೆ ಮಂಡಿಸಿರತಕ್ಕಂಥ ಈ ಮಸೂದೆಯನ್ನು ಅನುಮೋದಿಸುತ್ತೇನೆ.

*ಶ್ರೀ ಎಂ. ಮಾದಯ್ಯ (ನಂಜನಗೂಡು—ಅನುಸೂಚಿತ ಜಾತಿಗಳು).—ಈ ಮಸೂದೆಯಮೇಲೆ ಮಾತನಾಡಬೇಕೆಂಬ ಆಶೆ ಇರಲಿಲ್ಲ. ಆದರೆ ಒಂದೆರಡು ಅಂಶವನ್ನು ಮಾತ್ರ ತಿಳಿಸುತ್ತೇನೆ. ಈ ಬಿಲ್ಲನ್ನು ನಾನು ಸ್ವಾಗತಿಸುತ್ತೇನೆ. ಇದನ್ನು ಸ್ವಾಗತಿಸುವಾಗ ಒಂದು ಕೊರತೆ ಹೇಳದೆ ಇದ್ದರೆ ವಿಧಿ ಇಲ್ಲ. Personal and Miscellaneous Inams Abolition Bill ಮಂಡಿಸಿದಾಗ ಸಹ ನಾನು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಇಷ್ಟಪಡಲಿಲ್ಲ. ಈಗ ಈ ವಿಚಾರದಲ್ಲಿ ಒಂದೆರಡು ಅಂಶಗಳನ್ನು ಶ್ರುತಪಡಿಸುತ್ತೇನೆ. To a certain extent and subject to certain conditions I welcome this measure. ಜನ ಸಾಮಾನ್ಯರಿಗೆ ಅನುಕೂಲವಾಗ ತಕ್ಕಂಥ ಯಾವ ಜಮೀನು ಸುಧಾರಣೆ ಕ್ರಮವಾದರೂ ಸ್ವಾಗತಾರ್ಹವಾದುದೇ. ಜಮೀನು ಸುಧಾರಣೆಯ ವಿಚಾರದಲ್ಲಿ ಈ ಮಸೂದೆ ಒಂದು ಹೆಜ್ಜೆ ಮುಂದೆ ಹೋಗಿರುವುದರಿಂದ ಇದನ್ನು ಸ್ವಾಗತಿಸಬೇಕಾಗಿದೆ.

ಕೆಲವು ಸದಸ್ಯರು ಸೂಚನೆ ಕೊಟ್ಟಿರುವ ರೀತಿಯಲ್ಲಿ ಇದು ಕೇವಲ ಕೆಲವು ಸಂಸ್ಥೆಗಳ ಅಥವಾ ವ್ಯಕ್ತಿಗಳಿಗೆ ಇರತಕ್ಕ ಹಕ್ಕನ್ನು ತೆಗೆದು ಇನ್ನೊಂದು ಪಂಗಡದ ರೈತರಿಗೆ ಅಥವಾ ಸಂಸ್ಥೆಗಳಿಗೆ ಕೊಟ್ಟ ಹಾಗಾಗುತ್ತದೆಯೇ ಹೊರತು ಸಂಪೂರ್ಣವಾಗಿ ಒಂದು ಸ್ಕೆನ್ ಟಿಫಿಕ್ ಬೇಸಿಸ್ ಮೇಲೆ ಮಾಡಿದ ಸುಧಾರಣೆ ಅಲ್ಲ ಎಂದು ನಾನು ತಿಳಿದು ಕೊಂಡಿದ್ದೇನೆ. ಆ ವಿಚಾರವಾಗಿ ಶ್ರೀಮಾನ್ ರಾಮರಾಯರೂ ಸಹ ಚೆನ್ನಾಗಿ ಹೇಳಿದ್ದಾರೆ. ಕೆಲವರು ಮಾತನಾಡದೆ ಇದ್ದರೂ ಸಹ ಇದು ಈ ಮಾನ್ಯ ಸಭೆಯ ಬಹು ಮಂದಿ ಸದಸ್ಯರ ಅಭಿಪ್ರಾಯ ಮತ್ತು ಇಡೀ ದೇಶದ ಅಭಿಪ್ರಾಯ ಎನ್ನುವುದನ್ನು ಸರ್ಕಾರ ಮನಗಾಣಬೇಕು. ನಾನು ಪದೇ ಪದೇ ಹೇಳುತ್ತಾ ಇರುವ ಹಾಗೆ, ದೇಶದಲ್ಲಿ ಸರ್ಕಾರದ ಆಡಳಿತ ಸೂತ್ರವನ್ನು ಹಿಡಿದುಕೊಂಡು ಆಡಳಿತ ನಡೆಸುತ್ತಿರುವವರಾಗಲಿ, ಶಾಸನ ಸಭೆಯ ಸದಸ್ಯರಾಗಲಿ, ಜನಸಾಮಾನ್ಯರ ಪ್ರತಿನಿಧಿಗಳಾಗಿ ಕೆಲಸ ಕಾರ್ಯಗಳನ್ನು ನಡೆಸುತ್ತಾ ಇದ್ದಾರೆಯೇ ಹೊರತು ಬೇರೆ ಅಲ್ಲ ಎಂಬ ನಂಬಿಕೆಯನ್ನು ಜನಸಾಮಾನ್ಯರಲ್ಲಿ ಹುಟ್ಟಿಸಿಕೊಂಡು ಹೋಗಬೇಕು. ಅದೇ ಸೆಕ್ಯುಲರ್ ಸ್ಟೇಟ್‌ನ ಒಂದು ರೀತಿ ನೀತಿ ಎಂದು ನಾನು ಭಾವಿಸುತ್ತೇನೆ. ಅದು ಆಗುವವರೆಗೂ ಸಹ ನಾವು ಅಷ್ಟು ಸಂತೋಷ ಪಡಬೇಕಾದ್ದಿಲ್ಲ. ಆದರೂ ಇದನ್ನು ಆದಷ್ಟು ಬೇಗ ಈ ಮಂತ್ರಿ ಮಂಡಲ ಅಥವಾ ಈ ಸರ್ಕಾರದ ಅಧಿಕಾರದಲ್ಲಿರುವವರು ಈ ಜಮೀನು ಸುಧಾರಣೆಯನ್ನು ಗವರ್ನ್‌ಮೆಂಟ್ ಆಫ್ ಇಂಡಿಯಾ ಪ್ಲಾನಿಂಗ್ ಕಮೀಷನ್ನರು ಹೇಳಿರುವ ರೀತಿಯಲ್ಲಿ ಸಂಪೂರ್ಣವಾಗಿ ಜಾರಿಗೆ ತರುತ್ತೇವೆ ಎಂದು ಭರವಸೆ ಕೊಟ್ಟಿರುವುದರಿಂದ ಇದನ್ನು ನಾನು ಸ್ವಾಗತಿಸಬೇಕಾಗುತ್ತದೆ. ಯಾರಾದರೂ ಒಬ್ಬ ವ್ಯಕ್ತಿಯನ್ನು ಹೊಗಳುವ್ದಕ್ಕಾಗಿ ನಾನು ಇಲ್ಲಿ ಹೇಳುತ್ತಿಲ್ಲ. ಈಗ ಈ ಜಮೀನು ಸುಧಾರಣೆಗೆ ಸಂಬಂಧವಾದ ಪೋರ್ಟ್ ಫೋಲಿಯೋ ಇರತಕ್ಕ ಶ್ರೀಮಾನ್ ಕಡಿದಾಳ್ ಮಂಜಪ್ಪನವರು-ಅವರ ಹೆಸರನ್ನು ನಾನು ಹೇಳುತ್ತೇನೆ, ಜನಸಾಮಾನ್ಯರ ಹಿತ ಚಿಂತಕರು, ಚಾಂಪಿಯನ್ ಎಂದು ಹೇಳಿ ಹೆಸರು ತೆಗೆದು ಕೊಂಡಿರತಕ್ಕವರು—ಅವರ ಅಧಿಕಾರಾವಧಿಯಲ್ಲೇ ಈ ಸುಧಾರಣೆ ಸಂಪೂರ್ಣವಾಗಿ ಜಾರಿಗೆ ತರಬೇಕೆಂದು ಹೇಳಿ ನಾನು ಕೇಳಿಕೊಳ್ಳುತ್ತೇನೆ ಮತ್ತು ಆ ರೀತಿ ತರುವುದಾಗಿ ಭರವಸೆ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಕೆಲವರು ಬಯ್ಯುತ್ತಾರೆ.

ಶ್ರೀ ಎಂ. ಮಾದಯ್ಯ.—ಎಲ್ಲಿಯವರೆಗೆ ಇಂಡಿಯಾ ಸರ್ಕಾರದವರ ಮತ್ತು ಪ್ಲಾನಿಂಗ್ ಕಮೀಷನ್‌ನವರ ಅಭಿಪ್ರಾಯವನ್ನು ಈ ಸರ್ಕಾರ ಕಾರ್ಯರೂಪಕ್ಕೆ ತರಬೇಕಾಗಿದೆಯೋ ಅಲ್ಲಿಯವರೆಗೂ ನಿಮ್ಮನ್ನು ಬಯ್ಯುತ್ತಾರೆ ಎಂಬುದಾಗಿ ನಿಮ್ಮ ಮನಸ್ಸಿನಲ್ಲಿದ್ದರೆ ನಾನು ಬೇರೆ ರೀತಿಯಾಗಿ ಹೇಳಬೇಕಾಗುತ್ತದೆ. ಈ ಕಾರ್ಯಗಳನ್ನೆಲ್ಲಾ ಮಾಡಲೇ ಬೇಕಾಗುತ್ತದೆ. ಇಲ್ಲಿರತಕ್ಕವರು ಯಾರು ಎಂದರೆ ಜನಸಾಮಾನ್ಯರ ಪ್ರತಿನಿಧಿಗಳು; ಪಾರ್ಲಿಮೆಂಟಿನಲ್ಲಿ ಮತ್ತು ಕೇಂದ್ರ ಸರ್ಕಾರದಲ್ಲಿ ಇರುವವರೂ ಸಹ ಜನಸಾಮಾನ್ಯರ ಪ್ರತಿನಿಧಿಗಳು. ಇಡೀ ದೇಶವನ್ನೇ ಪ್ರತಿನಿಧಿನಿತಕ್ಕ ಪ್ರತಿನಿಧಿಗಳು, ಜನಸಾಮಾನ್ಯರ ಪ್ರತಿನಿಧಿಗಳು, ಅವರ ಅಭಿಪ್ರಾಯವನ್ನು ಪ್ರತಿಬಿಂಬಿಸಿ, ಅವರು ಒಂದು ಸೂಚನೆಯನ್ನು ಕೊಟ್ಟರೆ ಅದನ್ನು ಕಾರ್ಯರೂಪಕ್ಕೆ ತರದೇ ಇದ್ದರೆ ಖಂಡಿತ ವಾಗಿಯೂ ಸಹ ಅದು ರಾಜ್ಯಾಂಗಕ್ಕೆ ವಿರೋಧವಾಗಿ

(ಶ್ರೀ ಎಂ. ಮಾದಯ್ಯ.)

ಅಲ್ಲಿ ಹೇಳಿರುವ ರೀತ್ಯಾ ಕೆಲಸ ಕಾರ್ಯಗಳನ್ನು ನಡೆಸಿದಂತೆ ಆಗುವುದಿಲ್ಲ ಎಂಬುದನ್ನು ತಾವು ಮನವರಿಕೆ ಮಾಡಿಕೊಳ್ಳಬೇಕು. ಇದನ್ನು ಸ್ವಾಗತಿಸಿದರೂ ಸಹ ಒಂದು ಅಂಶವನ್ನು ತಾವು ಮರೆಯಬಾರದು. ಇತರ ಸಂಸ್ಥಾನಗಳಿಗಿಂತ ಮೈಸೂರು ಸಂಸ್ಥಾನದಲ್ಲಿ ಈ ಜಮೀನು ಸುಧಾರಣೆ ಅಷ್ಟು ವೇಗವಾಗಿ ಹೋಗುತ್ತಿಲ್ಲ ಎಂಬ ಕೂಗು ಇದೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಖಂಡಿತವಾಗಿಯೂ ಸಹ ಈ 3 ವರ್ಷದ ಅವಧಿಯಲ್ಲಿ ಸಂಪೂರ್ಣವಾಗಿ ಭೂಸುಧಾರಣೆಯನ್ನು ದೇಶದಲ್ಲಿ ಜಾರಿಗೆ ತಂದು ಜನಸಾಮಾನ್ಯರಿಗೆ ತೃಪ್ತಿಯನ್ನುಂಟುಮಾಡಿ, ಸೆಕ್ಯುಲಾರ್ ಸ್ಟೇಟ್‌ನ ಮುಖ್ಯವಾದ ಒಂದು ಅಂಗವಾಗಿರತಕ್ಕ ಮೈಸೂರನ್ನು ಮಾಡಲ್ ಮೈಸೂರಾಗಿ ಮಾಡಬೇಕು ಎಂಬುದನ್ನು ಒತ್ತಾಯ ಪಡಿಸುವುದಕ್ಕೋಸ್ಕರವಾಗಿ ಮಾತ್ರ ನಾನು ಈ ಮನೂದೆಯ ಪೇರೆ ಮಾತನಾಡಬೇಕೆಂದು ಎದ್ದೆ. ಈಗಾಗಲೇ ನಾನು ಹೇಳಿರುವಂತೆ ಖಂಡಿತವಾಗಿಯೂ ಈ ಭೂಸುಧಾರಣೆಯನ್ನು ಜಾರಿಗೆ ತರಬೇಕು. ಅನೇಕ ಸಂಸ್ಥಾನಗಳಲ್ಲಿ ಸೀಲಿಂಗ್ ಲಿಮಿಟ್‌ನ್ನು ಗೊತ್ತು ಮಾಡಿದ್ದಾರೆ. ನೀವು ಅಂಥಾದ್ದು ಏನೂ ಮಾಡಿಲ್ಲ. ಯೋಚನೆಮಾಡಿದರೆ ಶ್ರಿಮಾನ್ ರಾಮರಾಯರು ಹೇಳಿದಂತೆ ಎಷ್ಟೋ ಜನರ ಪಲ್ಸ್‌ನ್ನು ಈಗ ತಾವು ನೋಡಬಹುದು. ಅವರ ಅಭಿಪ್ರಾಯವೇ ಅನೇಕರ ಅಭಿಪ್ರಾಯ ಮತ್ತು ದೇಶದ ಅಭಿಪ್ರಾಯ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಅಂದ ಮಾತ್ರದಲ್ಲಿ ನಾವು ದೇಶದ ಪ್ರತಿನಿಧಿಗಳಾಗಿರುತ್ತೇವೆಯೇ ಹೊರತು ಮತ್ತೆ ಬೇರೆ ಅಲ್ಲ. ನೀವೂ ಸಹ ನಮ್ಮ ಪ್ರತಿನಿಧಿಗಳಾಗಿದ್ದು ರಾಜ್ಯಾಂಗ ಸುಧಾರಣೆಗನುಗುಣವಾಗಿ ರಾಜ್ಯಭಾರ ಮಾಡುತ್ತಿರುವಾಗ ಸಂಪೂರ್ಣವಾಗಿ ಆ ರಾಜ್ಯಾಂಗದಲ್ಲಿ ಹೇಳಿರುವ ವಿಧಿಗಳಿಗೆ ಅನುಸಾರವಾಗಿ ಕೆಲಸ ಮಾಡಬೇಕು ಎಂಬ ದೃಷ್ಟಿಯಿಂದ ಆದಷ್ಟು ಬೇಗ ಒಂದು ರೂಪದಲ್ಲಿ ಈ ರೀತಿ ಪೀಸ್‌ಫುಲ್ ಆಗಿ ಫರ್ಸ್‌ನಲ್ ಇನಾಂಸ್ ಮತ್ತು ರಿಲಿಜಿಯಸ್ ಅಂಡ್ ಚಾರಿಟಬಲ್ ಇನಾಂಸ್ ಎಂದು ತರುವುದಕ್ಕಿಂತಲೂ ಒಂದೇ ಸಾರಿ ಬಿಲ್ಲು ತರಬಹುದಾಗಿತ್ತು, ಇದನ್ನು ಏಕೆ ತರಬೇಕಾಗಿತ್ತು ಎಂದು ಶ್ರಿಮಾನ್ ರಾಮರಾಯರು ಹೇಳಿದ ಹಾಗೆ ಕೇಳಿದ್ದೆ, ಅದು ನಿಜವಾದರೆ ಅದನ್ನು ಸಂಪೂರ್ಣವಾಗಿ ಒಪ್ಪಬೇಕು. ಕಾರಣಾಂತರದಿಂದ ನಿಮಗೆ ಮನಸ್ಸಿದ್ದೂ ಸಹ ಕಾರ್ಯರೂಪಕ್ಕೆ ತರದೆ ಇದ್ದರೆ ಧೈರ್ಯಮಾಡಿದೆ ಹಾಗಾಗುವುದಿಲ್ಲ. ಎದೆಗಾರಿಕೆಯಿಂದ ಕೆಲಸ ಮಾಡಿದ ಹಾಗಾಗುವುದಿಲ್ಲ. ಭೂಸುಧಾರಣೆಯನ್ನು ಮಾಡಿ ಇಡೀ ಭಾರತ ದೇಶದಲ್ಲಿರುವ 20-25 ಸಂಸ್ಥೆಗಳಿಗೂ ಸಹ ಮೈಸೂರು ಮಾದರೀ ಸಂಸ್ಥಾನವಾಗುವಂತೆ ಮಾಡಬೇಕೆಂದು ಹೇಳುತ್ತೇನೆ. ಈ ರೀತಿ ಸುಧಾರಣೆಗಳನ್ನು ಮಾಡುವಾಗ ಕೆಲವರಿಗೆ ತೃಪ್ತಿಯಾಗಬಹುದು, ಕೆಲವರಿಗೆ ತೃಪ್ತಿಯಾಗದೇ ಇರಬಹುದು. ಆದರೆ ತಾವು ಮಾತ್ರ ನಾವು ಹಾಕಿಕೊಟ್ಟಿರುವ ರಾಜ್ಯಾಂಗವನ್ನು ಕಣ್ಣು ಮುಚ್ಚಿಕೊಂಡು ಇಂಪ್ಲಿಮೆಂಟ್ ಮಾಡಬೇಕು. ಆ ದೃಷ್ಟಿಯಿಂದ ಇದನ್ನು ಹೇಳುವುದಕ್ಕೆ ಮುಖ್ಯವಾಗಿ ನಿಂತಿದ್ದೇನೆ. ಸ್ವಾಮಿ, ಈ ಧರ್ಮ ಸಂಸ್ಥೆಗಳು ಮತ್ತು ಮತ ಸಂಬಂಧವಾದ ಸಂಸ್ಥೆಗಳ ವಿಚಾರದಲ್ಲಿ ಈಗ ತಂದಿರತಕ್ಕ ಬಿಲ್ಲಿನಲ್ಲಿ ಅನೇಕರು ಕೆಲವು ಶಂಕೆಗಳನ್ನು ವ್ಯಕ್ತಪಡಿಸಿದ್ದಾರೆ ಆ ಸಂಸ್ಥೆಗಳ ಆಡಳಿತಕ್ಕೆ ಧಕ್ಕೆ ಬರುತ್ತದೆ ಎಂದು ಹೇಳಿದ್ದಾರೆ. ಅದಕ್ಕೆ ಮಾನ್ಯ ಮಂತ್ರಿಗಳು ಇದನ್ನು introduce ಮಾಡುವಾಗಲೇ ಉತ್ತರ ಹೇಳಿದ್ದಾರೆ. ಅದನ್ನು ಎಲ್ಲರೂ ಗಮನದಲ್ಲಿಡಬೇಕು. ಈ ಬಿಲ್ಲನ್ನು ಸ್ವಾಗತಿಸುವಾಗ ಮುಖ್ಯವಾಗಿ ಒತ್ತಿಹೇಳಬೇಕಾದ ಅಂಶ ಎಂದರೆ ಧಾರ್ಮಿಕ ಸಂಸ್ಥೆಗಳು ಮತ್ತು ಮತ ಸಂಬಂಧವಾದ ಸಂಸ್ಥೆಗಳು ಸಾರೋದ್ಧಾರವಾಗಿ ನಡೆಯುವುದಕ್ಕೆ ಏನು ಸೌಲಭ್ಯಬೇಕೋ ಅದನ್ನು ಖಂಡಿತವಾಗಿಯೂ ಮಾಡಬೇಕು. ಹಾಗಂದ ಮಾತ್ರದಲ್ಲಿ ಧಾರ್ಮಿಕ ಮತ್ತು ಮತ ಸಂಬಂಧವಾದ ಸಂಸ್ಥೆಗಳು ಸಮಾಜದಲ್ಲಿ ಒಂದು ವಿಧವಾಗಿ ಆತಂಕ ಕೊಡತಕ್ಕ ಸಂಸ್ಥೆಗಳಾಗಿರತಕ್ಕದ್ದನ್ನು ತಪ್ಪಿಸಿ ಅದನ್ನು ನಿವಾರಣೆ ಮಾಡುವುದಕ್ಕೆ ಬೇರೆ ಮಾರ್ಗಗಳು ಇವೆ. ಇದು ಇಂಡಿಯಾ ದೇಶ ಹಿಂದೂ ದೇಶವಾದ್ದರಿಂದ ಧಾರ್ಮಿಕ ಮತ್ತು ಇತರ ಮತ ಸಂಬಂಧವಾದ ಸ್ವಾತಂತ್ರ್ಯ ಭಾರತ ರಾಜ್ಯಾಂಗದಲ್ಲಿ ಇರುವುದರಿಂದ ಆ ಸಂಸ್ಥೆಗಳಿಗೆ ಅವು ಸಮರ್ಪಕವಾಗಿ ನಡೆಯುವುದಕ್ಕೆ ಏನೇನು ವ್ಯವಸ್ಥೆ ಬೇಕೋ ಅವನ್ನೆಲ್ಲಾ ಮಾಡಬೇಕು, ಅವಕ್ಕೆ ತೊಂದರೆಯಾಗತಕ್ಕ ರೀತಿಯಲ್ಲಿ ಮಾಡಬಾರದು ಎಂದು ಹೇಳಿ ಒತ್ತಾಯಪಡಿಸುತ್ತೇನೆ. ಇನ್ನೊಂದು ಮುಖ್ಯವಾದ ವಿಚಾರ ನಾನು ಹೇಳಬೇಕೆಂದು ಇದ್ದೇನೆ. ತಾವು ಸರ್ಕಾರದಿಂದ 18 ಲಕ್ಷ ರೂಪಾಯಿ ಖರ್ಚಾಗುತ್ತದೆ ಎಂದು ಹೇಳುತ್ತೀರಿ. ಇದು ಜಾಸ್ತಿಯಾಗುತ್ತದೆ. ನಾವು ಮೈಸೂರಿನಲ್ಲಿ ಡಿಫಿಸಿಟ್ ಬಡ್ಜೆಟ್ face ಮಾಡುತ್ತಾ ಇರುವಾಗ ಇಂಥಾ ಒಂದು ಬಿಲ್ಲನ್ನು ತಂದು ಸರ್ಕಾರದಿಂದ ಅಷ್ಟು ಹಣ ಕೊಡತಕ್ಕದ್ದು ಸರಿಯಲ್ಲ ಎಂದು ನಾನು ಹೇಳುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ನಲಹೆ ಏನು ?

ಶ್ರೀ ಎಂ. ಮಾದಯ್ಯ.—ಇದನ್ನು ಯಾವರೀತಿಯಲ್ಲಾದರೂ ಯೋಚನೆ ಮಾಡಿ ಸರ್ಕಾರದಿಂದ ಕೊಡತಕ್ಕ ಹಣವನ್ನು ಏಕೆ ತಪ್ಪಿಸಬಾರದು ಎಂಬುದನ್ನು ತಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಪರ್ಸನಲ್ ಇನಾಂ ಬಿಲ್ಲಿನಲ್ಲಿ ಆದರೆ ಒಂದು ಗೊತ್ತಾದ ಅವಧಿಯವರೆಗೆ ಕಾಂಪೆನ್ಸೇಷನ್ ಕೊಟ್ಟು ನಿಲ್ಲಿಸುತ್ತೇವೆ. ಆದರೆ ಇದು ಖಾಯಂ ಆಗಿ ಕೊಡಬೇಕಾಗುತ್ತದೆ. ವರ್ಷೇ ವರ್ಷೇ ಅಷ್ಟು ಹಣ ಕೊಡಬೇಕಾದದ್ದು ಅನಗತ್ಯ. ಈ ಬಿಲ್ಲನ್ನು ನಾವು ತಂದು ಪಾಸ್‌ಮಾಡಿ, ಲಾ ಮಾಡುವುದರಿಂದ ನಾವು ದೇಶಕ್ಕೆ ಅಷ್ಟು ಉಪಕಾರ ಮಾಡಿದಂತಾಗುವುದಿಲ್ಲ ಎಂದು ಹೇಳುತ್ತೇನೆ. ಇದು ಮುಖ್ಯವಾಗಿ ಯೋಚನೆ ಮಾಡಬೇಕಾದ ವಿಚಾರ. ಈ ಸಂದರ್ಭದಲ್ಲಿ ಒಂದು ವಿಷಯ ಹೇಳಬೇಕಾಗುತ್ತದೆ.

Sri A. BHEEMAPPA NAIK (Molakalmuru).—I want a clarification. Does the Hon'ble Member want that it must be treated on the same lines as those of Personal and Miscellaneous Inams, compensation being paid to these temples and mutts ?

ಶ್ರೀ ಎಂ. ಮಾದಯ್ಯ.—ಸ್ವಾಮಿ, ಈ ಸರ್ವಿಸ್ ಇನಾಂಗಳನ್ನು ಅನುಭವಿಸಿದಿರುವ ಗ್ರಾಮ ನೌಕರರು ಸುಮಾರು 26 ಸಾವಿರ ಜನರಿದ್ದಾರೆ. ಅವರನ್ನು ಸ್ವೈಚ್ಛೆಯಿಂದರಿ ನೌಕರರಾಗಿ ಪರಿಗಣಿಸಿ ಸಂಬಳ ಕೊಡಿ ಎಂದು ಹೇಳಿದರೆ ಅದಕ್ಕೆ ಸುಮಾರು 18-20 ಲಕ್ಷ ರೂಪಾಯಿಗಳು ಬೇಕಾಗುತ್ತದೆ, ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತೀರಿ. ಇಡೀ ದೇಶದ ಬೆನ್ನು ಮೂಳೆಯಂತಿದ್ದು ಸೇವೆ ಮಾಡುತ್ತಾ ದೇಶದ ಹೊರೆ ಹೊತ್ತಿರುವವರಿಗೆ ಈ 18 ಲಕ್ಷ ರೂಪಾಯಿಗಳನ್ನು ಕೊಡುವುದಕ್ಕೆ ಹಿಂಜರಿಯಬಾರದು. ಜನ ಸಾಮಾನ್ಯರ ನಿಜವಾದ ಪ್ರತಿನಿಧಿಗಳಾಗಿರುವ ಅವರಿಗೆ ಗಮನ ಕೊಡಬೇಕು. ನಿಜವಾದ ಸೇವೆ ಸಲ್ಲಿಸಿ ಇಡೀ

ರೆವೆನ್ಯೂ ಆಡಳಿತವನ್ನು ಬಾರಾ ಬಲೂತಿ ಪದ್ಧತಿ ಜಾರಿಗೆ ಬಂದಾಗಿನಿಂದ ಅವಿಚ್ಛಿನ್ನವಾಗಿ ನಡೆಸಿ ಎಲ್ಲಾ ಕೆಲಸ ಮಾಡಿರುವವರ ಮೇಲೆ ಈ ದಿವಸ ಕನಿಕರವಿಲ್ಲ. ಇದು ಮುಖ್ಯವಾಗಿ ಗಮನಿಸಬೇಕಾದ ವಿಷಯ. That is one of the points that prompted me to speak on this Bill.

ಅವಿಚ್ಛಿನ್ನವಾಗಿ ಸೇವೆ ಸಲ್ಲಿಸಿರುವ ಸುಮಾರು 26 ಸಾವಿರ ನೌಕರರ ವಿಚಾರದಲ್ಲಿ ನಿಗಾಕೊಟ್ಟು ಅವರಿಗೆ ಈ ಜಮಿನಾನ್ನು ಖಾಯಂಮಾಡಿ, ಸಂಬಳ ಕೊಡಲು ಇತರ ಸಂಸ್ಥಾನಗಳಾದ ಮದ್ರಾಸು ಮತ್ತು ಬೊಂಬಾಯಿಗಳಲ್ಲಿ ಮಾಡಿರುವಹಾಗೆ ಒಂದು ಬಿಲ್ಲನ್ನು ಮುಂದಿನ ಅಧಿವೇಶನದಲ್ಲಾದರೂ ತರಬೇಕು. ಜನ ಸಾಮಾನ್ಯರ ಹಿತಕ್ಕಾಗಿ ಮಾಡುವುದನ್ನು ಯಾರೂ ಒಪ್ಪದಿರುವುದಿಲ್ಲ. ಇದನ್ನು ತಾವು ಮಾಡಬೇಕು. ಇಂಥ ಮನೂದೆ ಮಾಡಲು ಮನಸ್ಸು ಮಾಡುವಾಗ ಇದನ್ನೂ ಖಂಡಿತ ಗಮನಿಸಬೇಕು.

ಸಭಾಪತಿಯವರು.—ಶ್ರೀ ಭೀಮಪ್ಪ ನಾಯಕರು ಕೇಳಿರುವುದು ಪರ್ಸನಲ್ ಮತ್ತು ಮಿಸಲೇನಿಯಸ್ ಇನಾಂ ಬಿಲ್ಲಿನಲ್ಲಿ ಇನಾಂದಾರರಿಗೆ ಕಾಂಪೆನ್ಸೇಷ್ಷ ಕೊಡುವ ಹಾಗೆ ರಿಲಿಜಿಯಸ್ ಅಂಡ್ ಚಾರಿಟೆಬಲ್ ಇನಾಂಗಳಿಗೂ ಕಾಂಪೆನ್ಸೇಷ್ಷ ಕೊಡಬೇಕೆಂಬ ಅಭಿಪ್ರಾಯ ನಿಮಗಿದೆಯೆ, ಹೇಗೆ ಎಂದು.

Sri D. DEVARAJA URS.—It is like this, Sir. In the case of personal inams compensation is paid in a lumpsum and once and for all, whereas here we have to pay compensation in the form of *tasdik* every year. I want to know whether Mr. Madiah wants this *tasdik* to be paid every year or whether he wants a lumpsum compensation to be paid once and for all.

Mr. CHAIRMAN.—That is exactly the point that was asked by me. Sri. Madiah will answer you.

ಶ್ರೀ ಎಂ. ಮಾದಯ್ಯ.—ಈ ವಿಚಾರದಲ್ಲಿ ನನ್ನ ಅಭಿಪ್ರಾಯವನ್ನು ಇದುವರೆಗೆ ಮಾತನಾಡಿದಾಗಲೇ ಹೇಳಿದ್ದೇನೆ. ಅವರಿಗೆ ಒಂದು ಗೊತ್ತಾದ ಅವಧಿಯಲ್ಲಿ ಕಾಂಪೆನ್ಸೇಷ್ಷ ಕೊಡಬೇಕೆಂದು ಗೊತ್ತುಮಾಡಿದೆ. ಹಾಗೆ ಕೊಟ್ಟವರಿಗೆ ಯಾವಾಗಲೂ ಕೊಡುತ್ತಾ ಇರಬೇಕಾಗುತ್ತದೆ. ಇದನ್ನೇಕೆ ಕೊಡಬೇಕು ? ಇದರ ಆವಶ್ಯಕತೆ ಕಂಡುಬರುವುದಿಲ್ಲ. ಕೊಡುವುದು ನನಗೆ ಸರಿಯಾಗಿ ಕಾಣುವುದಿಲ್ಲ. ಸರ್ಕಾರದಿಂದ ಈ ರೀತಿಯಾಗಿ ಕೊಡುವ ಪದ್ಧತಿ ಸರಿಯಲ್ಲ. ನೀವು ಕಾಂಪೆನ್ಸೇಷ್ಷ ಕೊಡುವುದು ಸಾಧುವಲ್ಲ. ಅದರಲ್ಲೂ ಸಹ ಈ ಸರ್ಕಾರ ಡಿಫಿಸಿಟ್ ಬಡ್ಜೆಟ್ ಮಾಡಿ ಅದನ್ನು ಸರಿದೂಗಿಸಲು ಡೈರೆಕ್ಟ್ ಮತ್ತು ಇಂಡೈರೆಕ್ಟ್ ತೆರಿಗೆಗಳನ್ನು ಹಾಕಿ ಆ ಮೂಲಕ ಜನ ಸಾಮಾನ್ಯರ ರಕ್ತ ಹೀರುತ್ತಿರುವಾಗ ಈ ರೀತಿ ಕೊಡುವುದು ಅಷ್ಟು ಸಾಧುವಲ್ಲ. ಈಗಾಗಲೇ ಖೋತಾ ಸರಿಪಡಿಸಲು ನಾನಾ ರೀತಿಯಲ್ಲಿ ಪ್ರಯತ್ನ ನಡೆಯುತ್ತಿದೆ. ಎಕ್ಸೈಜ್ ಬಾಬಿನಲ್ಲಿ ಸುಮಾರು 2 ಕೋಟಿ ರೂಪಾಯಿಗಳ tainted money ವಸೂಲು ಮಾಡುತ್ತಿದ್ದೇವೆ. ಪಾನನಿರೋಧವನ್ನು ಹಣದ ಅಭಾವದಿಂದ ಮುಂದುವರಿಸದಿರುವುದು ರಾಜ್ಯಾಂಗದ ಪ್ರಕಾರ ವಿರೋಧವಾದ ಹಾಗಾಗುತ್ತದೆ. ಹಣ ಬರಲೆಂಬ ಉದ್ದೇಶದಿಂದ ಪಾನನಿರೋಧವನ್ನು ಮುಂದುವರಿಸದೆ ಒಂದು ರೂಪದಲ್ಲಿ ಆದರಿಂದ ಹಣ ಸಂಪಾದಿಸುವುದು ಸರಿಯಲ್ಲ ಮತ್ತು ಆ ರೀತಿಯಾಗಿ ಬಂದಿರುವ ಹಣವನ್ನು ಇನ್ನೊಂದು ರೂಪದಲ್ಲಿ ಹೀಗೆ ಕೊಡುವುದು ಸಹ ಸರಿಯಲ್ಲವೆಂದು ಹೇಳುತ್ತೇನೆ. ಇದನ್ನು ಈ ಮನೂದೆಯು ಸೆಲೆಕ್ಟ್ ಕಮಿಟಿಗೆ ಹೋದಾಗ ತೀವ್ರವಾಗಿ ಆಲೋಚಿಸಿ ಈಗ ಮಾಡಿರುವುದನ್ನು ನಿಲ್ಲಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಇದಲ್ಲದೆ ಕೆಲವು ಧಾರ್ಮಿಕ ಸಂಸ್ಥೆಗಳ ವಿಚಾರದಲ್ಲಿ ಸರ್ಕಾರ ಬಹಳ ಅನ್ಯಾಯ ಮಾಡುತ್ತಿದೆ, ಅವರಿಗೆ ನಿತ್ಯಗಟ್ಟಲೆ ಆಡಳಿತವನ್ನು ವಹಿಸಿದರೆ ಯಾವ ರೀತಿ ಅದನ್ನು ಮಾಡುತ್ತಾರೆ ಎಂಬ ಆಪಾದನೆಯಿದೆ. ಇದಕ್ಕೆ ಆಧಾರವಿಲ್ಲ ಎಂದು ಹೇಳಬಲ್ಲೆ. ಏಕೆಂದರೆ ಇಲ್ಲಿ ಗೊತ್ತುಮಾಡಿರುವುದು ಜಮಿನಾನು ವ್ಯವಸ್ಥೆ ಮಾತ್ರ. ಈ ಸಂಸ್ಥೆಗಳು ಸಾರೋದ್ಧಾರವಾಗಿ ನಡೆಯಬೇಕು. ಇಡೀ ಭಾರತದಲ್ಲಿ ಹಿಂದಿನ ಸಮಾಜ ಮತ್ತು ಇತರ ಮತಗಳು ಮುಂದುವರಿಯಬೇಕು. ಬೇಕಾದರೆ ಕಮ್ಯೂನಿಸ್ಟ್ ಸ್ಟೇಟ್ ಆದಾಗ ಮಾತ್ರ ಪ್ರಾಯಶಃ ಇದೆಲ್ಲಾ ಹೋಗಬಹುದು. ಭಾರತ ರಾಜ್ಯಾಂಗವಿರುವವರೆಗೆ, ಪ್ರಜಾಪ್ರಭುತ್ವವಿರುವವರೆಗೆ ಧಾರ್ಮಿಕ ಸಂಸ್ಥೆ ಮತ್ತು ಮತಸಂಬಂಧವಾದ ಸಂಸ್ಥೆಗಳೇನಿವೆಯೋ ಅವನ್ನು ತೆಗೆಯಬಾರದು, ಅವಕ್ಕೆ ಧಕ್ಕೆ ಬರಬಾರದು. ಆದರೆ ಇವುಗಳಿಂದ ನ್ಯಾಷನಲ್ ಜೋನಿಂಗಿಗೆ ಧಕ್ಕೆ ಬರುವಾಗ ನಾವು ಪ್ರತಿಭಟನೆಲೇ ಬೇಕು. ಇದಕ್ಕೆ ಬೇರೆ ಮಾರ್ಗವಿದೆ. ಈಗ ಹರಿಜನರಿಗೆ ಧಾರ್ಮಿಕ ಸಂಸ್ಥೆಗಳಲ್ಲಿ ಮತ್ತು ಮತ ಸಂಬಂಧವಾದ ಸಂಸ್ಥೆಗಳಲ್ಲಿ ಅಡ್ಡಿಯಿರುವುದರಿಂದ ಅವನ್ನು ತೆಗೆಯಬೇಕೆಂದು ಕೆಲವರು ಹೇಳುತ್ತಾರೆ. ಆದರೆ ಹಾಗ ಮಾಡಬಾರದು. ಸಮಾಜದಲ್ಲಿ ಯಾರಿಗೂ ಆ ಸಂಸ್ಥೆಗಳಿಗೆ ಹೋಗಲು ಅಡ್ಡಿ ಮಾಡಕೂಡದೆಂದು ರಾಜ್ಯಾಂಗದಲ್ಲಿ ವಿಧಿಯಿದೆ. ಮತ್ತು ಇದಕ್ಕೆ ಸಂಸ್ಥಾನದ ಶಾಸನ ಸಭೆಗಳು ಮಾಡಿರುವ ರಾ ಇದೆ, ಹಕ್ಕಿದೆ, ಪಾರ್ಲಮೆಂಟಿನಲ್ಲೂ ಸಹ ಅನೇಕ ಮೆಷರ್ಸ್ ತರುತ್ತಿದ್ದಾರೆ. ಆದ್ದರಿಂದ ಇವುಗಳಲ್ಲಿ ಆಯಾ ಧರ್ಮಗಳಿಗೆ ಸೇರಿದವರಿಗೆ, ಆಯಾ ಮತ ಸಂಬಂಧವಾದ ಧಾರ್ಮಿಕ ಸಂಸ್ಥೆಗಳಲ್ಲಿ ನಂಬಿಕೆಯಿರುವವರಿಗೆ ಅವಕಾಶವಿರುವಂತೆ ಮಾಡಬೇಕು. ಶೃಂಗೇರಿ ಮಠಕ್ಕೆ ಸಂಬಂಧಪಟ್ಟಂತೆ 47,440 ಎಕರೆ ಜಮೀನಿದೆಯೆಂದು ತಾವು ಈಗಾಗಲೆ ಬಿಲ್ಲಿನಲ್ಲಿ ಹೇಳಿದ್ದೀರಿ. ಪೆಮೊರ್ಯಾಂಡಂನಲ್ಲಿ "the scheme for abolition of these inams contemplates taking the following steps" ಎಂದು ಬಹಳ ಹೇಳಿದ್ದೀರಿ. ಧಾರ್ಮಿಕ ಸಂಸ್ಥೆ ಮತ್ತು ಮತ ಸಂಬಂಧವಾದ ಸಂಸ್ಥೆಗಳ ಆಡಳಿತದಲ್ಲಿರುವ ಜಮೀನುಗಳಿಗೆ ಸಂಬಂಧವಾದ ವ್ಯವಸ್ಥೆ ಮಾಡಿ ಅದನ್ನು ಖರೀದಿ ಚೆನೆಂಟ್ಸ್ ಮತ್ತು ಪರ್ಮನೆಂಟ್ ಚೆನೆಂಟ್ಸ್ ಹೊಂದುವುದಕ್ಕೆ ಅವಕಾಶ ಮಾಡಿದೆಯೇ ಹೊರತು ಮಠಗಳ ಆಡಳಿತಕ್ಕೆ ಧಕ್ಕೆ ಬರುವ ರೀತಿಯಲ್ಲಿ ಮಾಡಿಲ್ಲ. ಆದ್ದರಿಂದ ಯಾರೂ ಇದನ್ನು ತಪ್ಪಾಗಿ ಭಾವಿಸಬಾರದು ಮತ್ತು ಈ ಬಿಲ್ಲನ್ನು ವಿರೋಧಿಸಬಾರದೆಂದು ಕೇಳಿಕೊಳ್ಳುತ್ತೇನೆ. ಇದಲ್ಲದೆ ಈ ಸಭೆಯಲ್ಲಿ ಯಾರೂ ಸಹ ಈ ಬಿಲ್ಲನ್ನು ವಿರೋಧಿಸಿರುವ ಹಾಗೆ ಕಾಣಲಿಲ್ಲ.

Sri D. DEVARAJA URS.—Sir, if my friend permits me to interrupt, I would like to say that I am also aware that nobody opposed the Bill. The point at dispute now is as to how the compensation should be paid for these temples or institutions, whether

(Sri D. DEVARAJA URS.)

it should be lumpsum or *tasdhik* every year.

2-30 P. M.

ಶ್ರೀ ಎಂ. ಮಾದಯ್ಯ.—ಸರ್ಕಾರದವರು ಕೊಡ ತಕ್ಕದ್ದನ್ನು ಮಾತ್ರ ನಾನು ವಿರೋಧಿಸುತ್ತೇನೆ. ಬಾಕಿ ಯಾರಾದರೂ ಏನಾದರೂ ಮಾಡಿಕೊಳ್ಳಲಿ. ಆದರೆ ಶ್ರೀಮಾನ್ ದೇವರಾಜೇ ಅರಸರು ಕೆಲವು ಮತ ಸಂಬಂಧವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ.

Sri D. DEVARAJA URS.—He wants to be like Sir Roger De Coverley !

ಶ್ರೀ ಎಂ. ಮಾದಯ್ಯ.—ನಾನು ಹೇಳುವುದನ್ನೆಲ್ಲಾ ಹೇಳಿದ್ದೇನೆ. ಅತ್ತರಾಗಿ ಆ ಧರ್ಮ ಸಂಸ್ಥೆಗಳಿಗೂ ಒಂದು ರೀತಿಯಲ್ಲಿ ತೊಂದರೆ ಬಾರದೆ ಇರುವಂತೆಯೂ, ಇತ್ತರಾಗಿ ದೇವಾಲಯಗಳಲ್ಲಿ ಪೂಜೆ ಇತ್ಯಾದಿಕಾರ್ಯ ಗಳಿಗೆ ತೊಂದರೆ ಬಾರದೆ ಇರತಕ್ಕಂಥ ರೀತಿಯಲ್ಲಿಯೂ ಮತ್ತು ಸರ್ಕಾರಕ್ಕೂ ಸಹ ನಷ್ಟವಾಗದೆ ಇರುವಂಥ ಒಂದು ಸೂಕ್ಷ್ಮವಾದ ಮತ್ತು ಅನುಕೂಲವಾದಂಥ ಸೂಚನೆಯನ್ನು ಕೊಟ್ಟಿದ್ದೇನೆ. ಆದರೆ ತಾವು ಏನು ಹೇಳುತ್ತಿದ್ದೀರಿ ಎಂಬುದೇ ಗೊತ್ತಾಗುವುದಿಲ್ಲವಲ್ಲಾ ?

ಈ ಕೆಳಗಿನ ವಾಕ್ಯಗಳನ್ನ ಓದಿದರೆ ಶ್ರೀ ದೇವ ರಾಜ ಅರಸರ ಪ್ರಶ್ನೆಗೆ ಉತ್ತರವಾಗಬಹುದು ಎಂದು ತಿಳಿಯುತ್ತೇನೆ—

> "In order to ensure that the purpose for which the inams were granted is not affected, provision has been made in the present Bill for the payment to the institution which owned the inam an annual allowance equal to the net income derived by the institution from the lands which cease to vest in the institution by virtue of this law."

Sri D. DEVARAJA URS.—I have read it and I have understood it also.

MR. CHAIRMAN.—Sri Madiah made it very clear that he is opposed to *tasdhik* allowance to the tune of Rs. 18 lakhs. He wants the Select Committee to devise a method by which the institutions should exist.

ಶ್ರೀ ಎಂ. ಮಾದಯ್ಯ.—ಹಾಗಾದರೆ ಈ ಸಂಸ್ಥೆಗ ಳನ್ನು ಮತ್ತು ಈ ಸಂಸ್ಥೆಗಳ ಇನಾಂದಾರರುಗಳನ್ನು ಏತಕ್ಕಾಗಿ ಡಿಫೈನ್ ಮಾಡುವಾಗ ಹಾಗೆ ಹೇಳಿದ್ದಾರೆ? ಆ ಹೆಫಿನಿಷ್ಕರ್ಲ್ಲಿ ಈ ರೀತಿಯಾಗಿ ಹೇಳಿದ್ದಾರೆ.

> "'Inamdar' means a religious or charitable institution owning an inam."

ಇಲ್ಲಿ ಹೇಳುತ್ತಾರೆ:

> "The scheme for abolition of these inams contemplates taking the following steps :—
>
> "Confirmation of certain lands and buildings to the inamdars."

ಎಂದರೆ ಶ್ರೀ ಡಿ. ದೇವರಾಜ ಅರಸರು ಅಪ್ರಹೆಂಡ್ ಮಾಡಿರತಕ್ಕಂಥ ಒಂದು ವಿಷಯವನ್ನು ಇದು ನಿವಾ ರಣೆ ಮಾಡಬಹುದು. ಅವರು ಏನು ಹೇಳುತ್ತಿದ್ದಾ ರೆಂದರೆ: ಈಗ ಮತ ಸಂಬಂಧವಾಗಿ ಜಮೀನುಗಳನ್ನು ಕೊಟ್ಟಿದ್ದಾರೆ, ಆದ್ದರಿಂದ ಈಗ ಅವುಗಳನ್ನು ದೇವರ ಅಥವಾ ದೇವಸ್ಥಾನದ ಹೆಸರಿನಲ್ಲಿಟ್ಟುಬಿಡುವುದರಿಂದ ಯಾವಾಗಲೂ ಈ ಪೂಜಾದಿ ಕಾರ್ಯಗಳಿಗೆ ತೊಂದರೆ ಬರುವುದಿಲ್ಲವೆಂದೂ ಮತ್ತು ಹೀಗೆ ಮಾಡದೆ ಈ ಭೂಮಿ ಗಳನ್ನು ಆ ಖಡೀ ಅಥವಾ ಪರ್ಮನೆಂಟ್ ಟೆನೆಂಟ್ಸ್‌ಗ ಳಿಗೆ ಕೊಟ್ಟರೆ ಆಗ ಈ ಕಾನೂನು ಜಾರಿಗೆ ಬಂದ ಮೇಲೆ ಅವರು ಆ ದೇವಸ್ಥಾನದ ವಿಷಯಲ್ಲಿ ತಾತ್ಸಾರ ಮಾಡಬಹುದು, ಇದರಿಂದ ಮುಂದಕ್ಕೆ ತೊಂದರೆಗಳು ಬರಬಹುದೆಂದೂ ಹೇಳಿದ್ದಾರೆ. ಎಂದರೆ ಇಂಥ ಒಂದು ಶಂಕೆ ಅವರಲ್ಲಿದೆಯೆಂದು ವ್ಯಕ್ತಪಟ್ಟಂತಾಗಿಯಿತು. ಈ ತೆರನಾದ ತೊಂದರೆಗಳು ಬಾರದೆ ಇರುವ ಹಾಗೆ ಮಾಡಲು ಇದನ್ನು ಸೂಕ್ಷ್ಮ ರೀತಿಯಲ್ಲಿ ತಿದ್ದುಪಡಿ ಮಾಡಲು ಇದನ್ನು ಸೆಲೆಕ್ಟ್ ಸಮಿತಿಗೆ ಹಾಕಬೇಕೆಂದು ನಾನೂ ಸಹ ಹೇಳುತ್ತೇನೆ. ಇದಕ್ಕೆ ನಾನೂ ಒಪ್ಪು ತ್ತೇನೆ. ಆದರೆ ಅವರು ಮತ್ತೊಂದು ವಿಚಾರ ಏನು ತಿಳಿಸಿದ್ದಾರೆಂದರೆ. ಈ ತಸ್‌ದೀಕ್ ಸಾಲದು. ಇದನ್ನು ತಾವು ಇನ್ನೂ ಹೆಚ್ಚುಮಾಡಬೇಕು ಎಂದು. ಎಂದರೆ ಸರ್ಕಾರದವರು ಈ ತಸ್‌ದೀಕನ್ನೇ ಕೊಡಬೇಕೆಂಬ ತೀರ್ಮಾನಕ್ಕೆ ಬಂದರೆ ಆಗ ತಾವು ಈ ದಿವಸ ಏನುಕೊಡಬೇಕೆಂದು ಸೂಚಿಸಿದ್ದೀರೋ ಈ ತಸ್‌ದೀಕ್ ಸಾಕಾಗುವುದಿಲ್ಲ ಇದನ್ನು ಇನ್ನೂ ಹೆಚ್ಚಿನ ಬೇಕಾಗಿ ಬರುತ್ತದೆಯೆಂದು ಒಂದು ಅಭಿಪ್ರಾಯ ವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಈಗ ಸರ್ಕಾರದ ವರು ಏನು ಒಂದು ಹೀಗೆ ತಸ್‌ದೀಕನ್ನು ಕೊಡಬೇ ಕೆಂದು ಈ ದಿವಸ ಸೂಚಿಸಿರುತ್ತಾರೋ ಇದೇ ಬಹಳ ಜಾಸ್ತಿಯಾಗಿದೆ. ಇಷ್ಟನ್ನು ಸಹ ಕೊಡಕೂಡದು ಎಂಬ ವಾದವೂ ಸಹ ಬಂದಿದೆ. ಇದನ್ನು ನಾನೂ ಸಹ ಅನುಮೋದಿಸುತ್ತೇನೆ. ಆದರೆ ಒಟ್ಟಿನಲ್ಲಿ ನಾನು ಇಷ್ಟು ಹೇಳುತ್ತೇನೆ. ಈ ಧರ್ಮ ಸಂಸ್ಥೆಗಳು ಮತ್ತು ಮತ ಸಂಬಂಧವಾದ ಇತರೆ ಸಂಸ್ಥೆಗಳು, ಈ ದೇವ ಸ್ಥಾನಗಳು ಇತ್ಯಾದಿಗಳೆಲ್ಲಾ ಒಂದು ಸುವ್ಯವಸ್ಥಿತ ವಾದ ಮಾರ್ಗದಲ್ಲಿ ನಡೆದುಕೊಂಡು ಹೋಗುವುದಕ್ಕೆ ಏನು ಅನುಕೂಲಗಳನ್ನು ಕಲ್ಪಿಸಬೇಕೋ ಅವನ್ನು ಸರ್ಕಾರದವರು ಕಲ್ಪಿಸಲೇಬೇಕು. ಇನ್ನು ಶ್ಯಂಗೇರಿಗೆ ಸಂಬಂಧಪಟ್ಟ ಜಮೀನುಗಳ ವಿಚಾರದಲ್ಲಿ "All the tenants are Khadim tenants" ಎಂದು ಹೇಳಿದ್ದಾರೆ. ಆದರೆ ಈ ಜಮೀನುಗಳೆಲ್ಲಾ ಅವರಿಗೇ ಸೇರತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡಿರು ವುದರಿಂದ, ಆರೈತರಿಗೂ ಯಾವ ತೊಂದರೆಗಳೂ ಬರು ವುದಿಲ್ಲ. ಹೀಗೆ ಮಾಡಿದ್ದರಿಂದ ಆ ಮತಕ್ಕೂ ಸಹ ಯಾವ ತೊಂದರೆಯೂ ಬರುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಒಂದು ವೇಳೆ ಅಂಥ ತೊಂದರೆ ಗಳೇನಾದರೂ ಬರುವಹಾಗಿದ್ದರೆ ಅಥವಾ ಏನಾ ದರೂ ಅಂಥಾ ಕೊರತೆಗಳುಂಟಾಗುವ ಪಕ್ಷಕ್ಕೆ ಅವು ಗಳನ್ನೆಲ್ಲಾ ನಿವಾರಣೆಮಾಡಿ ಸರ್ವ ಸಂಸ್ಥೆಗಳಿಗೂ ಒಂದೇ ವಿಧವಾದ ಎಲ್ಲಾ ಸೌಲಭ್ಯಗಳನ್ನೂ ಏರ್ಪಾಡು ಮಾಡಿಕೊಡಬೇಕೆಂತಲೂ ಹೇಳುತ್ತೇನೆ. ಈ ಅಂಶಗಳ ನ್ನೆಲ್ಲಾ ಆ ಶ್ರೀ ಎಚ್. ಬಿ. ಗುಂಡಪ್ಪ ಗೌಡರ ಸಮಿತಿ ಯಲ್ಲೂ ಕೂಡ ತಿಳಿಸಿದ್ದಾರೆ. ಅದನ್ನೆಲ್ಲಾ ನಾನು ಓದಿನೋಡಿದ್ದೇನೆ. ಈಗ ತಾವು ಆ ವಿಚಾರಗಳೆಲ್ಲ ವನ್ನೂ ಸಹ ತಮ್ಮ ಗಮನದಲ್ಲಿಟ್ಟುಕ್ಕೊಂಡು ಈ ಸಂಸ್ಥೆ

ಗಳಿಗೆ ಯಾವ ರೀತಿಯಲ್ಲೂ ಧಕ್ಕೆ ಬಾರದ ಹಾಗೆ ಇದನ್ನು ನೂಕ್ತ ರೀತಿಯಲ್ಲಿ ತಿದ್ದುಪಾಟು ಮಾಡಿ, ಹೆಚ್ಚು ಕಾಲ ವಿಳಂಬಕ್ಕೆ ಅವಕಾಶ ಮಾಡದಂತೆ, ಜಾಗ್ರತೆಯಾಗಿ ಇದನ್ನು ಸೆಲೆಕ್ಟ್ ಸಮಿತಿಯವರ ಪರಿಶೀಲನೆಗೊಪ್ಪಿಸಿ, ಇದು ಬೇಗ ಅಲ್ಲಿಂದ ಬರುವಂತೆ ಮಾಡಬೇಕೆಂದು ಹೇಳಿ ನಾನು ಈ ಮಸೂದೆಯನ್ನು ಸ್ವಾಗತಿಸುತ್ತಾ ಇದಕ್ಕೆ ನನ್ನ ಬೆಂಬಲವನ್ನು ನೀಡುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ (ಮೂಡಿಗೆರೆ, ಚಿಕ್ಕಮಗಳೂರು ಅನುಸೂಚಿತ ಜಾತಿಗಳು).—ಸ್ವಾಮಿ, ಈಗ ಈ ಮಾನ್ಯ ಸಭೆಯ ಮುಂದೆ ಇರತಕ್ಕಂಥ ಮತ್ತು ಇಲ್ಲಿಗೆ ನಾಲ್ಕಾರು ದಿವಸಗಳಿಂದಲೂ ಬಹಳವಾಗಿ ಚರ್ಚೆಯಾಗಿರತಕ್ಕಂಥ ಮತ್ತು ಈ ದಿವಸ ಕೂಡ ಇನ್ನೂ ಅದೇ ರೀತಿಯಾಗಿ ಬಿಸಿಯಾಗಿಯೇ ಅನೇಕ ಅಂತಗಳ ಬಗ್ಗೆ ಚರ್ಚೆಯಾಗುತ್ತಿರುವಂಥ ಈ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಈ ಮಸೂದೆಯು ಇಲ್ಲಿಗೆ ನಾಲ್ಕಾರು ದಿವಸಗಳ ಹಿಂದೆಯೇ ಸರ್ವಾನುಮತದಿಂದ ಅಂಗೀಕಾರವಾಗಬೇಕಾಗಿತ್ತು. ಆದರೆ ಏನೋ ಕೆಲವು ಕಾರಣಾಂತರಗಳಿಂದ ಆ ರೀತಿ ಅನುಮೋದನೆಯಾಗುವುದಕ್ಕೆ ಆಗಲಿಲ್ಲ. ದೇಶದಲ್ಲಿರತಕ್ಕ ಸಾಮಾನ್ಯ ಜನರು—ಅದರಲ್ಲೂ ಈ ರೈತಾಪಿ ವರ್ಗದವರು ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ತಮ್ಮ ಹಕ್ಕು ಹಾಧ್ಯತೆಗಳನ್ನೆಲ್ಲಾ ಮತ್ತು ಈ ಹಕ್ಕು ಬಾಧ್ಯತೆಗಳಿಗೆ ಸಂಬಂಧಪಟ್ಟಿಂಥ ಎಲ್ಲಾ ವಿಚಾರಗಳನ್ನೂ ಬಹಳ ಸೂಕ್ತವಾದಂಥ ರೀತಿಯಲ್ಲಿ ತೀರ್ಮಾನ ಮಾಡಿ ತಮಗೆಲ್ಲಾ ಒಂದು ಅನುಕೂಲ ಮಾಡಿಕೊಡುತ್ತಾರೆಂದು ಏನೊಂದು ಆಶೋತ್ತರಗಳನ್ನಿಟ್ಟುಕೊಂಡಿದ್ದರೋ ಅಂಥವರ ಆ ಆಶೋತ್ತರಗಳನ್ನು ಈ ದಿವಸ ಈಡೇರಿಸಲು ಮಾನ್ಯ ಸದಸ್ಯರುಗಳೆಲ್ಲರೂ ಒಂದು ಜಾಣ್ಮೆಯಿಂದ ಈ ಮಸೂದೆಯನ್ನು ವಿಮರ್ಶೆಮಾಡಿ ಇದನ್ನು ಬೇಗ ಪಾಸ್ ಮಾಡಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆಂದು ಅವರು ತಿಳಿದುಕೊಂಡಿದ್ದರು. ಆದರೆ ಈ ದಿವಸ ಕೆಲವು ಮಾನ್ಯ ಸದಸ್ಯರುಗಳು ಈ ಬಿಲ್ಲಿನಲ್ಲಿ ಅಡಕಮಾಡಿರತಕ್ಕಂಥ ಶೃಂಗೇರಿಯನ್ನು ಈ ಮಸೂದೆಯಿಂದ ತೆಗೆದುಹಾಕಿ ಇದಕ್ಕೆ ಒಂದು ಪ್ರತ್ಯೇಕವಾದ ಬಿಲ್ಲನ್ನು ತರಬೇಕೆಂದೂ ಮತ್ತು ಇತರ ಎಲ್ಲಾ ಸಂಸ್ಥೆಗಳಿಗೂ ಒಂದು ಬಿಲ್ಲನ್ನು ತರಬೇಕೆಂದೂ ಹೇಳಿರುತ್ತಾರೆ. ಆದರೆ ಈ ಹಿಂದೆ ಈ ಪರ್ಸನಲ್ ಮತ್ತು ಮಿಸಲೇನಿಯಸ್ ಇನಾಂ ಅಬಾಲಿಷ್ಡ್ ಬಿಲ್ಲನ್ನು ಈ ಸಭೆಯ ಮುಂದೆ ತಂದಿದ್ದಂಥಾ ಕಾಲದಲ್ಲೇ ಅನೇಕ ಜನ ಮಾನ್ಯ ಸದಸ್ಯರುಗಳು ಈ ದಿವಸ ಸಭೆಯ ಮುಂದೆ ಮಂಡಿಸಿರತಕ್ಕಂಥ ಈ ಧಾರ್ಮಿಕ ಸಂಸ್ಥೆಗಳ ಇನಾಂ ಬಿಲ್ಲನ್ನು ಆ ಮಸೂದೆಯಲ್ಲೇ ಸೇರಿಸಿ ತರಬೇಕಾಗಿತ್ತೆಂದೂ ಆ ರೀತಿ ತಾರದೆ ಇದ್ದುದು ಒಂದು ದೊಡ್ಡ ಲೋಪವೆಂದೂ ಆ ದಿವಸ ತಿಳಿಸಿದ್ದಾರೆ. ಆ ದಿವಸ ಕೆಲವು ಸದಸ್ಯರು ಶೃಂಗೇರಿಗೇ ಒಂದು ಅಲಾಯಿದಾ ಬಿಲ್ಲನ್ನು ತರಬೇಕೆಂದು ಹೇಳಿದ್ದಂತೆ ನನಗೆ ಜ್ಞಾಪಕವಿದೆ. ಮತ್ತೆ ಕೆಲವರು ಅದಕ್ಕೇ ಒಂದು ಬಿಲ್ಲು—ಇದಕ್ಕೇ ಒಂದು ಬಿಲ್ಲು ತರತಕ್ಕಂಥಾದ್ದು ಸರಿಯಲ್ಲವೆಂದು ಅದನ್ನು ವಿರೋಧಿಸಿಯೂ ಇದ್ದರು. ಆದರೆ ಹಾಲಿ ಈಗ ನಮ್ಮ ಮುಂದೆ ಮಂಡಿಸಿರತಕ್ಕಂಥ ಮಸೂದೆಯು ಸರ್ವಸಮ್ಮತವಾದಂಥ ಮಸೂದೆಯಾಗಿದೆಯೆಂದು ಕೆಲವು ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಹೀಗೆ ಏನು ಒಂದು ಅಭಿಪ್ರಾಯವನ್ನು ಈ ಹಿಂದೆ ಬಹಳ ಜನ ಸದಸ್ಯರು ವ್ಯಕ್ತಪಡಿಸಿದ್ದಾರೋ ಅದರಂತೆ ಇದು ನ್ಯಾಯವಾಗಿರುತ್ತೆಂದು ನನಗೂ ಕೂಡ ಅನ್ನಿಸುತ್ತಿದೆ. ಹೀಗೆ ಕೆಲವರು ಸರಿಯಾಗಿದೆ, ಮತ್ತೆ ಕೆಲವರು ಸರಿಯಾಗಿಲ್ಲವೆಂದು ಅವರವರ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ಆದರೆ ವಿರೋಧಿಸಿರತಕ್ಕವರ ಸಂಖ್ಯೆ ಕಡಮೆ. ಇದೇ ವಿಷಯವನ್ನು ನಾನು ಒಂದೆರಡು ವೃತ್ತಪತ್ರಿಕೆಗಳಲ್ಲಿಯೂ ಮತ್ತು ಹಸ್ತಪತ್ರಿಕೆಗಳಲ್ಲಿಯೂ ಕೆಲವರು ವಿರೋಧಿಸಿರುವಂತೆ ಬರೆದಿರುವುದನ್ನು ಓದಿರುತ್ತೇನೆ. ಹಾಗೆ ಎಷ್ಟು ಜನ ಅಥವಾ ಎಷ್ಟು ಮಂದಿ ಇದನ್ನು ವಿರೋಧಿಸಿರಬಹುದು ಎಂಬುದನ್ನು ಈ ದಿವಸ ಮಾನ್ಯ ಸಭೆಯು ವಿಮರ್ಶೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಈಗ ಸಾಮಾನ್ಯವಾಗಿ ನಮ್ಮಲ್ಲಿರುವ ರೈತರಲ್ಲಿ ಲಕ್ಷಾಂತರ ಜನರು ಕಷ್ಟಸ್ಥಿತಿಯಲ್ಲಿದ್ದರೂ ಕೂಡ, ಅವರು ತಮ್ಮ ಅನಕ್ಷರತೆಯ ದೆಶೆಯಿಂದ ಸರ್ಕಾರದವರ ಮುಂದೆ ಆಗಲಿ ಸಾರ್ವಜನಿಕರ ಮುಂದೆ ಆಗಲಿ ಹೇಳಿಕೊಳ್ಳುವುದಕ್ಕೆ ಅವಕಾಶವಿಲ್ಲದ ಸ್ಥಿತಿಯಲ್ಲಿದ್ದಾರೆ; ಅವರುಗಳು ಬಹುಮಟ್ಟಿಗೆ ತೊಂದರೆಯಿಂದ ಕೂಡಿದವರಾಗಿದ್ದಾರೆ. ವಿದ್ಯಾವಂತರಾದರೋ ತಮ್ಮ ಕಷ್ಟಗಳನ್ನು ಕುಂದುಕೊರತೆಗಳನ್ನು ಬಾಯಿಂದ ಹೇಳಿಕೊಳ್ಳುತ್ತಾರೆ; ಅನೇಕ ರೀತಿಗಳಲ್ಲಿ, ಅನೇಕ ಸಂದರ್ಭಗಳಲ್ಲಿ ಸಾರ್ವಜನಿಕರ ಮುಂದೆ, ಸರ್ಕಾರದವರ ಮುಂದೆ ತಮ್ಮ ಕುಂದುಕೊರತೆಗಳನ್ನು ಅವರು ಇಡಬಲ್ಲರು ಎಂಬುದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಇದನ್ನರಿತು ಆ ಲಕ್ಷಾಂತರ ಬಡಜನರ ದೃಷ್ಟಿಯಿಂದ ನಮ್ಮ ಸರ್ಕಾರದವರು ಧೈರ್ಯದಿಂದ ಈ ಬಿಲ್ಲನ್ನು ತಂದಿದ್ದಾರೆ. ಇಂಥ ಒಂದು ತತ್ವದೃಷ್ಟಿಯಿಂದ ನ್ಯಾಯವಾದ ಕಾರ್ಯವನ್ನು ಸಾಧಿಸುವುದರಲ್ಲಿ ಸರ್ಕಾರದವರು ಧೈರ್ಯವಾಗಿ ವರ್ತಿಸಿ ಸಮುದ್ರವೇ ಉಕ್ಕಿಬರಲಿ, ಭೂಮಿಯೇ ಬಿರಿದು ಇಬ್ಭಾಗವಾಗಲಿ, ಆಕಾಶವೇ ಕಳಚಿ ಬೀಳಲಿ, ಏನೇ ಬರಲಿ ಧೀರರು ತಮ್ಮ ದಾರಿಯನ್ನು ಬಿಟ್ಟು ಹೋಗುವುದಿಲ್ಲವೆನ್ನುವಂತೆ ಸರ್ಕಾರದವರು ಈ ಮಸೂದೆಯನ್ನು ಕೈಬಿಡುವುದಿಲ್ಲವೆಂದು ನಾನು ನಂಬಿದ್ದೇನೆ. ಈಗಲೂ ರೈತರ ವಿಷಯದಲ್ಲಿ ಏನು ಹೆಚ್ಚಿನ ಕುಂದುಕೊರತೆಗಳಿವೆಯೆಂದು ಸೂಚಿಸಿ ಬಂದಿರುವ ಒಂದು ಪತ್ರವನ್ನು ಈ ಮಾನ್ಯ ಸಭೆಯವರ ಗಮನಕ್ಕೆ ನಾನು ತರಬಯಸುತ್ತೇನೆ. ಇದರಲ್ಲಿ ಹೀಗೆ ಹೇಳಿದೆ:

Mr. CHAIRMAN.—May I know how this matter is relevant to the Bill?

Sri G. PUTTASWAMY.—It is a representation of the raiyats.....

Mr. CHAIRMAN.—We are discussing the Bill. Please confine yourself to the Bill.

ಶ್ರೀ ಜಿ. ಪುಟ್ಟಸ್ವಾಮಿ.—ಹೀಗೆ ರೈತರುಗಳು ಕಂದಾಯವನ್ನು ಯಾರಿಗೆ ಕೊಡುತ್ತಿದ್ದಾರೆ. ಅವರಿಂದ ತಾವು ಕಂದಾಯವನ್ನು ಕೊಡುತ್ತಿರುವುದಕ್ಕೆ ತಕ್ಕಮಟ್ಟಿಗಾದರೂ ಸಹಾಯವನ್ನು ಪಡೆಯುವುದಕ್ಕೆ ಬದಲಾಗಿ ಯಾವುದೊಂದು ಕನಿಷ್ಠ ಸಹಾಯವನ್ನೂ ಕೂಡ ಅವರುಗಳು ಪಡೆಯುತ್ತಿಲ್ಲವೆಂದು ಅವರು ನಿವೇದಿಸಿಕೊಳ್ಳುತ್ತಿದ್ದಾರೆ. ಅದರಲ್ಲೂ ಶೃಂಗೇರಿಯಲ್ಲಿ, ಬೇರೆ ಎಲ್ಲಾ ಸರ್ಕಾರಿ ಗ್ರಾಮಗಳಲ್ಲೂ ನಾನಾ ಅಭಿವೃದ್ಧಿಕಾರ್ಯಗಳನ್ನು ಕೈಕೊಂಡಿದ್ದರೂ ಇಲ್ಲಿ ಯಾವುದನ್ನೂ ಕೈಕೊಂಡಿಲ್ಲವೆಂದು ಅವರು ಅರಿಕೆ ಮಾಡಿಕೊಂಡಿದ್ದಾರೆ. ಸರ್ವೆ ಸೆಟಲ್‌ಮೆಂಟ್ ಏನೋ ಆಗಿದ್ದರೂಕೂಡ ಅಲ್ಲಿನವರಿಗೆ ಅಷ್ಟಾಗಿ ಅನುಕೂಲಗಳೇನೂ ಲಭಿಸಿಲ್ಲ, ಆಗಬೇಕಾದ ಅನುಕೂಲಗಳೇನೂ ಏರ್ಪಾಡಾಗಿಲ್ಲವೆಂದು ಹೇಳಿದ್ದಾರೆ. ಈ ಪರಿಸ್ಥಿತಿ ಶೃಂಗೇರಿಯಲ್ಲೇ ಅಲ್ಲದೆ,

(ಶ್ರೀ ಜಿ. ಪುಟ್ಟಸ್ವಾಮಿ.)

ಶೃಂಗೇರಿ ನಬ್ ತಾಲ್ಲೂಕಿಗೆ ಸೇರಿದ ಸುಮಾರು ಅನೇಕ ಗ್ರಾಮಗಳಲ್ಲಿ ನಾನು ಕಂಡ ಹಾಗೆ, ಇನಾಂ ಗ್ರಾಮಗಳ ದೆಶೆಯಿಂದ ಪಕ್ಕದಲ್ಲಿರುವ ಸರ್ಕಾರಿ ಗ್ರಾಮಗಳ ರೈತರಿಗೂ ಬಹಳ ತೊಂದರೆಯಾಗಿದೆ ಯೆಂಬದನ್ನು ಹೇಳಬಯಸುತ್ತೇನೆ. ಸಾಧಾರಣವಾಗಿ ಒಂದು ಇನಾಂ ಗ್ರಾಮದ ಪಕ್ಕದಲ್ಲಿರುವ ಸರ್ಕಾರಿ ಗ್ರಾಮದ ಜಮೀನುಗಳಿಗೆ ಅನುಕೂಲಪಡಿಸಬೇಕಾದರೆ ಇನಾಂ ಗ್ರಾಮಗಳ ಕೆರೆ ರಿಪೇರಿಯಾಗದೆ ಆ ರೈತರು ಗಳು ಹೈರಿಲ್ಲದೆ ಬಹಳ ಕಷ್ಟ ನಷ್ಟಗಳಿಗೆ ಗುರಿಯಾಗಿ ದ್ದಾರೆ. ಮೊನ್ನೆ ತಾನೆ ಬೆಳವಾಡಿ ಕೆರೆ ಒಡೆದು ಹೋಗಿ ಈಗ ಅದರ ರಿಪೇರಿ ಬಗ್ಗೆ ಸರ್ಕಾರದವರು ಹಣವನ್ನು ಮಂಜೂರು ಮಾಡುವುದಕ್ಕೆ ವಿಳಂಬಮಾಡುತ್ತಿದ್ದಾರೆ. ಶೃಂಗೇರಿ ಮಠದವರು ಈ ಕೆರೆ ಕಾಂಗಾರಿಗೆ ಸರಿಯಾಗಿ ಮೊಬಲಗು ಒದಗಿಸದೆ ಕೆಲಸ ನಿಂತುಹೋಗಿದೆ. ಸರ್ಕಾರದವರು ಮತ್ತು ಮಠದವರ ಜಂಘಾಟದ ಮಧ್ಯೆ ರೈತರುಗಳಿಗೆ ಮಾಡಿಕೊಡಬೇಕಾದ ಕೆಲಸಗಳು ಆಗದೆ ಬಹಳ ತೊಂದರೆಗಳಿಗೆ ಅವಕಾಶವಾಗಿದೆ ಯೆಂದು ಹೇಳದೆ ವಿಧಿಯಿಲ್ಲ. ಅನೇಕ ಇನಾಂ ಗ್ರಾಮ ಗಳಲ್ಲಿ ಅರಣ್ಯ ನಂಪತ್ತು ಬೇಕಾದಷ್ಟಿದೆ. ಶ್ರೀಗಂಧದ ಮರಗಳು ಬಹಳ ಮಟ್ಟಿಗೆ ಯೋಗ್ಯವಾದಂಥವು ಇವೆ. ಆ ಗ್ರಾಮಗಳಲ್ಲಿ ಎಷ್ಟು ಜನಸಂಖ್ಯೆಯಿದೆಯೋ ಎಷ್ಟು ಜಮೀನಿದೆಯೋ ಅದರಿಂದ ನಿರೀಕ್ಷಿಸುವುದಕ್ಕಿಂತಲೂ ಅತ್ಯಧಿಕವಾಗಿ ಎರಡರಷ್ಟು ಮೂರರಷ್ಟು ಹೆಚ್ಚಿಗೆ ಕುದಾಯ, ವಧಮಾನ ಬರುತ್ತಿದೆ. ಇಷ್ಟು ವರಮಾನ ಬರುತ್ತಿದ್ದರೂ ಕೂಡ ಅಲ್ಲಿನ ರೈತರುಗಳು ಅನೇಕ ವಿಧದಲ್ಲಿ ತೊಂದರೆಪಡಬೇಕಾಗಿದೆ. ಶೃಂಗೇರಿ ಮಠ ದವರು ತಮ್ಮ ಇನಾಂತಿಗಳಿಂದ ಎಷ್ಟು ವರಮಾನ ಬರುತ್ತಿದೆಯೋ ಅಷ್ಟನ್ನೂ ಖರ್ಚುಮಾಡುತ್ತಿಲ್ಲವೆಂದು ಅನೇಕ ಸಾರಿ ರೈತರು ಹೇಳುತ್ತಿದ್ದಾರೆ. ಹೀಗೆ ಅನೇಕ ತೊಂದರೆಗಳಿಗೆ ಗುರಿಯಾಗಿದ್ದಂತಹ ರೈತರುಗಳ ಕಷ್ಟ ವನ್ನು ಮನಗಂಡು ಸರ್ಕಾರದವರು ಇಷ್ಟರಮಟ್ಟಿಗೆ ಧೈರ್ಯದಿಂದ ಅವರ ಕಷ್ಟ ನಿವಾರಣೆಗೆ ಹೊರಟಿರುವುದು ನಿಜವಾಗಿಯೂ ಶ್ಲಾಘನೀಯವಾದ ವಿಚಾರ.

ಈ ಬಿಲ್ಲಿನಲ್ಲಿ ಅಡಗಿರತಕ್ಕ ವಿಷಯಗಳನ್ನು, ಪ್ರತಿ ಯೊಂದು ಕ್ಲಾಜನ್ನೂ ಕುರಿತು ಮಾನ್ಯ ಸದಸ್ಯರು ಆಗಲೇ ಹೇಳಿದ್ದಾರೆ. ಈ ಸಂದರ್ಭದಲ್ಲಿ ಸುಮಾರು 18 ಲಕ್ಷ ರೂಪಾಯಿಗಳನ್ನು ತಸ್ಕಿಕ್ ಅಲೋಯನ್ಸ್ ಎಂದು ಕೊಡುವುದರಿಂದ ಬಹಳ ಲುಕ್ಸಾನಾಗುತ್ತ ದೆಂದು ಕೆಲವು ಸದಸ್ಯರು ಹೇಳಿದ್ದಾರೆ. ಈಗ ಇನಾಂ ಗ್ರಾಮಗಳಲ್ಲಿ ವಾಸ್ತವವಾಗಿ ಹೆಚ್ಚಿನ ವರಮಾನ ಬರು ತ್ತಿದ್ದರೂ ಕೂಡ ಕಾರಣಾಂತರದಿಂದ ಸರಿಯಾದ ಅಂಕ ಅಂಶಗಳು ನೇರವಾಗಿ ನಮಗೆ ಸಿಕ್ಕುತ್ತಿಲ್ಲ. ಇದನ್ನು ತರದೂದು ಮಾಡಿ ಅಲ್ಲಿನ ಅರಣ್ಯಗಳಿಂದ ಮತ್ತು ಇತರ ಬಾಬುಗಳಿಂದ ಎಷ್ಟು ವರಮಾನ ಬರು ತ್ತಿದೆಯೆಂಬುದನ್ನು ಕೂಲಂಕಷವಾಗಿ ತರಿಸಿಕೊಂಡು ನೋಡುವುದಾದರೆ ತಮಗೆ ಖಂಡಿತವಾಗಿಯೂ ಅಷ್ಟು ನಿರಾಶೆಗೆ ಕಾರಣವಿಲ್ಲವೆಂದು ನಾನು ಹೇಳಬಲ್ಲೆ, ಸರ್ಕಾರದವರಿಗೆ ಏನೂ ಲುಕ್ಸಾನಾಗಲಾರದೆಂದು ನನಗನ್ನಿಸುತ್ತದೆ.

ರೈತರುಗಳಿಗೆ, ಖಾಯಂ ಷಿಕ್ಮಿದಾರರುಗಳಿಗೆ ಮತ್ತು ಹಿಡುವಳಿದಾರರಿಗೆ occupancy rights ಕೊಟ್ಟಿರ ತಕ್ಕ ವಿಚಾರದಲ್ಲಿ, ಅವರಿಗೆ ಸ್ವಲ್ಪಮಟ್ಟಿಗೆ ಅನುಕೂಲ ಗಳನ್ನು ಈಗ ಸರ್ಕಾರದವರು ಕಲ್ಪಿಸಿಕೊಟ್ಟಿದ್ದರೂ ಅನೇಕ ಸಂದರ್ಭಗಳಲ್ಲಿ ಕಂದಾಯವನ್ನು ಜಾಸ್ತಿ ಮಾಡಿರುವುದು ಈಗಾಗಲೇ ಕಂಡು ಬಂದಿದೆ. ಎಷ್ಟೋ ಸಂದರ್ಭಗಳಲ್ಲಿ ಶೃಂಗೇರಿ ಇನಾಂ ಗ್ರಾಮಗಳಲ್ಲಿ ಕ್ರಮ ಕ್ರಮೇಣ ವರ್ಷೇ ವರ್ಷೇ ಕಂದಾಯ ಜಾಸ್ತಿ ಮಾಡುತ್ತಾ ಹೋಗಿ ಆ ರೈತರುಗಳೀಗ ಆ ಹೊರೆ ಯನ್ನು ಹೊರಲಾರದೆ ಸರ್ಕಾರದವರು ಆ ಜವಾ ಬ್ದಾರಿಯನ್ನು ವಹಿಸಿಕೊಂಡರೆ ಸಾಕು ಎಂದು ಹೇಳು ತ್ತಿದ್ದಾರೆ. ಈ ಎಲ್ಲಾ ಕಾರಣಗಳಿಂದ ಈ ಮಸೂದೆ ಯನ್ನು ಹೃತ್ಪೂರ್ವಕವಾಗಿ ಅನುಮೋದಿಸುತ್ತೇನೆ.

Mr. CHAIRMAN.—We have ten minutes more before we can rise for lunch.

Sri Kadidal MANJAPPA.—I will speak for about ten minutes and continue later on.

Sir, I have followed the debate very carefully. Judging from the opinions expressed by several Hon'ble Members, I may safely conclude that there is no opposition at all to this Bill, I mean to the main principles of the Bill. Nobody has said that the Government is wrong in taking steps to abolish religious inams. Only in regard to some of the clauses of the Bill, objections have been raised. Though the Bill seeks to abolish all religious inams, the debate has centred round Sringeri Jahgir. I will come to the question of Sringeri Jahgir at a later stage. Now, I will confine myself to the several comments made in relation to certain provisions of the Bill.

Some Hon'ble Members have said that there is a discrepancy between the extent of lands mentioned in the Financial Memorandum and that mentioned in the Report of the Gundappa Gowda Committee. The figures mentioned in the Report of the Gundappa Gowda Committee were based on the figures available somewhere in the years 1901 or 1903, whereas the figures furnished in the Financial Memorandum are up-to-date and these figures were taken according to the figures available in the registers maintained under the Land Revenue Code. Therefore, the figures that the Government have given in the Financial Memorandum are corrected up-to-date.

Sri Srinivasa Iyengar, yourself, Sir, and Sri Rama Rao have raised some constitutional points. They have raised a doubt whether the Bill does not offend Article 26 of the Constitution. Sir, I am also a lawyer and have a practice of fifteen years.

Mr. CHAIRMAN.—Well, I am not.

Sri Kadidal MANJAPPA.—I have also taken legal opinion. I may straightaway say that the Bill is not repugnant to Article 26. Article 26 only deals with the management and other matters. Here, I have already made the point clear that if this Bill becomes law, it does not interfere with the religious practices or with the management of these institutions. The Supreme Court decision relied upon by you, Sir, does not refer to Article 31 A. It refers to Article 26. The decision is in relation to the management of certain religious institutions. I may read for the benefit of the Hon'ble Members Article 26. It reads like this.

> "Subject to public order, morality and health, every religious denomination or any section thereof, shall have the right —
>
> (*a*) to establish and maintain institutions for religious and charitable purposes;
>
> (*b*) to manage its own affairs in matters of religion;
>
> (*c*) to own and acquire movable and immovable property; and
>
> (*d*) to administer such property in accordance with law."

We do not come in the way of management of institutions. We do not propose to prevent them from owning or acquiring any property just as any other individual has got that right; or, we do not come in the way of administering such property. We only try to cancel the inam tenure and grant occupancy rights to certain tenants.

Sir, this is not the only State where an attempt has been made to abolish religious inams. In several States there are enactments already in force. They are more or less similar. In the neighbouring State of Madras, there is an Act known as the Estates Abolition Act. It is almost similar. Sir, I would like to read one or two sections in that Act.

Sri A. BHEEMAPPA NAIK.—Are the grants also similar?

Sri Kadidal MANJAPPA.—Yes. I will read. This is called the Madras Estates (Abolition and Conversion into Ryotwari) Act, 1948. I am reading Section 38. The headline is "Payment of *tasdik* allowance and additional compensation to institutions."

> 38 (1) Where an inam estate or part thereof was held immediately before the notified date by any religious, educational or charitable institution, the Government shall pay to the institution every year as a *tasdik* allowance—
>
> (*a*) in the case of an entire inam estate, the basic annual sum;
>
> (*b*) in the case of a part of an inam estate, such portion of the basic annual sum as may, on a calculation in the prescribed manner, be ascribed to that part....."

In Hyderabad there is an Act known as the Hyderabad Abolition of Jahgir's Regulation 1358 Fasli. I am reading section 16:

> "Provisions of this regulation shall apply.....
>
> or to any institutions established for the purpose."

Even in other States, there are enactments which provide for the abolition of all inams including religious inams. I am told that only in Bombay these religious inams are excluded, but there they are simply converted into ryotwari tenure. Therefore, they have not made any distinction in the case of religious inams. I may go a step further and say that lands belonging to Sringeri Jahgir situated in Madras State have been resumed in pursuance of this Madras Estates Abolition Act and the Jahgir has been paid compensation. So, I may straightaway say that this is not the only State where the Act, I do not want to say irreligious Act, sacrilegious Act.....

Mr. CHAIRMAN.—Whoever has said that it is a sacrilegious act?

ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—On a point of information, Sir. ಮದರಾಸಿನವರು ಯಾವ ಆಧಾರದ ಮೇಲೆ ಪರಿಹಾರ ಕೊಟ್ಟಿದ್ದಾರೆ?

Sri Kadidal MANJAPPA.—We have almost followed the model of Madras Act. Therefore, Sir.....

MR. CHAIRMAN.—The Hon'ble Minister will continue after lunch. We will now rise and meet again at 4 P.M.

The House rose for Lunch at Three of the Clock and reassembled at Four of the Clock.

(MR. SPEAKER in the Chair.)

SRI KADIDAL MANJAPPA.—Sir, I was submitting that in other States there are similar enactments providing for the abolition of religious inams. I may also add that the Planning Commission as well as the Government of India are anxious that we should introduce land reforms in the State as early as possible. Whether in this part of the House or in the other part of the other House, we have given a sort of pledge as it were to the electorate that we would introduce land reforms. I have also said on a previous occasion that the Government was obliged to bring in this measure on account of the views expressed by Hon'ble Members when the other Bill, namely the Mysore Personal and Miscellaneous Inams Abolition Bill, was being discussed.

Some Hon'ble Members expressed the view that it is possible that a future Government may reduce the *tasdik* allowance. I see the force of their arguments. To avoid that contingency the only remedy is to determine the compensation straightaway and then deposit the amount of compensation in the name of the institution and pay to these institutions the interest on the amount in deposit. That is one solution. The other solution is to take over all these lands, cancel the inam tenure, make the tenants as tenants cultivating under Government and pay the income or a percentage of income to these institutions annually. Both these alternative proposals may be examined by the Select Committee.

Sri M. V. Rama Rao and a few other friends said that this Bill does not help nearly 75 per cent of the tenants. It is true that the other tenants will have to be tenants under the Inamdar. I will be very happy if all these tenants are made the occupants. But I am asking whether we are prepared to take up that responsibility. Granting of occupancy rights to all the tenants involves a heavy commitment on the part of the State. As I have already suggested, the other alternative would be to cancel the inam tenure and convert the lands into Government lands, make the tenants as tenants cultivating under Government so that there may be direct relationship between the Government and the tenants. This aspect can be examined by the Select Committee.

My friend Sri K. Pattabhiraman said that the clause relating to payment of compensation may not stand in a court of law. He said that it is not mentioned in the clause specifically that tasdik allowance will be paid as compensation. I see the force of his contention. I agree with him when he said that it needs some modification.

Coming to Sringeri Jahgir, the Jahgir, is not a small firka. It is not as though it is a small area consisting of one or two villages. The area of arable land is about 47,000 acres; out of which nearly 20,000 acres are either forest or gomal lands.

Some Hon'ble Members have said that the management of this Jahgir is under Government and the raiyats are not experiencing any difficulty so far as the management is concerned. I am an elected representative of that Jahgir. (A Voice: 'Is it Jahgir or constituency?) Constituency. (A Voice: Constituency includes Jahgir?) Yes. I know the difficulties of the raiyats. I had to go 20 miles on some days. There is no proper communication, there is no proper medical aid, there are no irrigation facilities, and the raiyats are feeling that they are as though in a foreign country.

SRI J. MOHAMED IMAM (Jagalur).—Foreign countries are much better.

SRI S. SRINIVASA IYENGAR (T.-Narasipur).—The position is worse in some places.

SRI KADIDAL MANJAPPA.—According to the rules in force now, the Government is not authorised to spend for some of these amenities which are open

to the people living in Government villages.

For instance, if a tank has to be restored, the inamdar has to pay his quota, the raiyats have to pay their quota and then the Government will have to pay their quota. Unless the inamdar agrees, the Government cannot undertake the work of restoring tanks. Even in the case of roads, unless the inamdars are prepared to share their portion of the cost, the Government are not in a position to form new roads or repair the existing roads.

Sri P. R. RAMAIYA (Basavangudi).—Sir, you said that without the consent of the inamdar, no works can be taken up in inam villages. I want to tell you that as far as Sringeri is concerned, the authorities of the Jahgir have not stood in the way of any improvement that the Government contemplated to make Sir.

Mr. SPEAKER.—He means perhaps it is under Government Management.

Sri P. R. RAMAIYA.—What I was saying was, whatever improvement the Government wanted to make, the Jahgir authorities were not in the way of making these improvements and they were always prepared to pay their quota of the expenses.

Sri Kadidal MANJAPPA.—Sir, you were holding the Muzrai portfolio and I am at present holding the said portfolio. We know how things stand. Without the express consent of the authorities of the Mutt, even the Government cannot force the officer-in-charge to do certain things.

Sri P. R. RAMAIYA—It is a definite charge against the Jahgir. I would like to know whether there are any instances where the Jahgir has not co-operated with the Government when they wanted to make improvements.

Sri Kadidal MANJAPPA.—I can give you any number of instances.

But that apart, Sir, we cannot go against the current. When people are anxious that all these antiquated systems should go,—I am not referring to the Mutt or the religious practices there,—I am referring to the inam tenure, we have taken steps.....

Sri P. R. RAMAIYA.—Sir, you have not given any instances. You said only in general terms what the difficulties of the Government are; that is all.

Sri Kadidal MANJAPPA.—One recent instance I may quote, Sir. In consultation with the Muzrai Commissioner and the municipal authorities, I passed some orders regarding the repairs of certain roads. That order though passed nearly nine months ago, has not been given effect to till today. That is the position.

Sri P. R. RAMAIYA.—Your own officers are there.

Sri Kadidal MANJAPPA.—Hon'ble Members must be satisfied with this statement.

Sri P. R. RAMAIYA.—The point is that since 1936 your own officer is there. You have asked him to administer and so how can this charge be sustained, Sir?

Sri Kadidal MANJAPPA.—He is not all in all. Even the Guru whom I met a few months ago, said that he should obtain his consent before we spent money. Even in the question of restoring the Belavadi Tank which cropped up, we had to take the consent of the Swamiji to spend about 15,000—I do not exactly remember the figure. Without his consent, we could not spend that money. That is the position.

I was submitting, Sir, that the debate had centred round Sringeri Jahagir. I must once again repeat what I had said on a previous occasion, namely, that it is not the intention of the Government to wound the feelings of the disciples of the Mutt. I may also add that this Sringeri Mutt is an institution in which all classes of Hindus are interested. Some people argued as if it belonged to a particular sect or community. I do not think they are serious about that contention. This institution has been built up out of the contributions made by all sections of the public. And therefore Government as well as public are interested in safeguarding the interests of this institution. I have met the Senior Swamiji. He is a genuine *tapasvi*. I have great regard towards that Swamiji. But my regard towards theSwamiji should not come in the way of conferring certain rights on the raiyats.

(SRI KADIDAL MANJAPPA.)

My friend Sri Pattabhi Raman has stated that I am very lenient in fixing the compensation. In spite of my being very lenient, there are people who are criticising me as though I have done an act which cannot be excused. No doubt the payment of 18 lakhs of rupees every year as *tasdik* allowance is a heavy burden. We must find out a method whereby we can reduce this liability without reducing the income of these institutions. As I suggested Sir, the Select Committee may consider the suggestions I have made, namely, the determination of the compensation now alone or cancelling the inam tenure and making the raiyats tenants under Government.

There is not much to add, Sir. Hon'ble Members have on the whole accorded wholehearted support to this Bill. I am sure that when the Bill emerges out of the Select Committee with some modifications, it will be worthy of the unanimous approval of this Hon'ble House.

MR. SPEAKER.—The question is :

"That the Mysore (Religious and Charitable) Inams Abolition Bill, 1954 be taken into consideration."

The motion was adopted.

Motion to refer

SRI KADIDAL MANJAPPA.—Sir, I beg to move :

"That the Mysore (Religious and Charitable) Inams Abolition Bill, 1954 be referred to a Joint Select Committee of this House and the Legislative Council consisting of a total number of 18 Members (12 from this House and 6 from Legislative Council), that the concurrence of the Legislative Council be obtained therefor and that the following members of this House shall be Members of the Joint Select Committee :

Sriyuts

1. B. Hutche Gowda.
2. M. Chikkalingiah.
3. K. Pattabhiraman.
4. G. A. Thimmappa Gowda.
5. R. Anantaraman.
6. G. Sivappa.
7. K. Prabhakar.
8. B. Madhavachar.
9. P. R. Ramaiya.
10. D. Devaraj Urs.
11. Parameswarappa.
12. Sm. B. L. Subbamma.

MR. SPEAKER.—Motion moved :

"That the Mysore (Religious and Charitable) Inams Abolition Bill, 1954 be referred to a Joint Select Committee of this House and the Legislative Council) consisting of a total number of 18 member, (12 from this House and 6 from the Legislative Council) that the concurrence of the Legislative Council be obtained therefor and that the following members of this House shall be members of the Joint Select Committee :

Sriyuts

1. B. Hutche Gowda.
2. M. Chikkalingiah.
3. K. Pattabhiraman.
4. G. A. Thimmappa Gowda.
5. R. Anantaraman.
6. G. Sivappa.
7. K. Prabhakar.
8. B. Madhavachar.
9. P. R. Ramaiya.
10. D. Devaraj Urs.
11. Parameswarappa.
12. Sm. B. L. Subbamma.

The motion was adopted.

MR. SPEAKER.—Under Rule 90-P of the Rules of Procedure and Conduct of Business in the Mysore Legislative Assembly the member in charge of the Bill who is also a member in charge of the Department will be also a member of the Committee. The Joint Select Committee will elect its own Chairman as per Rule 90-T.

The House will now rise for the day and meet tomorrow at 8-30 A.M.

The House adjourned at Thirty Minutes past Four of the Clock to meet at Thirty minutes past Eight of the Clock on Saturday, 10th April 1954.

WD 1581—GPB—550—12-8-54